ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

31 ಮೇ, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 81 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಇಂದು ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗು ಗುಜರಾತ್ ಟೈಟನ್ಸ್ ನಡುವಿನ ಐಪಿಎಲ್ ಫೈನಲ್ ಪಂದ್ಯ ನಡೆಯಲಿದೆ.

ಪ್ರಾಚೀನ ಭಾರತದ ದೇವಾಲಯ ಆರ್ಥಿಕತೆ » 2

ಅಂಬೇಡ್ಕರ್ ಕೇವಲ ಒಂದು ಸಮುದಾಯಕ್ಕೆ ಸೀಮಿತ » 3

ಪ್ರತಿಯೊಬ್ಬರೂ ಸ್ವ-ಇಚ್ಛೆಯಿಂದ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿ » 4

ಜೂ.3ರಂದು ಡಿ.ಕೆ.ಶಿವಕುಮಾರ್‌ಗೆ ಪಟ್ಟಾಭಿಷೇಕ

ಶಾಸಕಾಂಗ ಪಕ್ಷದ ನಾಯಕನಾಗಿ ಸರ್ವಾನುಮತದಿಂದ ಆಯ್ಕೆ | ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ಡಿ.ಕೆ.ಶಿ.

• ಪ್ರಜೋದಯ ವರದಿ

ಬೆಂಗಳೂರು: ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಜೂನ್ 3ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಬೆನ್ನಲ್ಲೇ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವುದು ನಿಶ್ಚಿತವಾಗಿತ್ತು. ಪ್ರಕ್ರಿಯೆಯಂತೆ ಶಾಸಕಾಂಗ ಪಕ್ಷದ ಸಭೆ ನಡೆಸುವ ಮೂಲಕ ನೂತನ ನಾಯಕನ ಆಯ್ಕೆ ಅಧಿಕೃತವಾಗಿ ನಡೆದಿದೆ.

ಹೊಸ ಶಾಸಕಾಂಗ ಪಕ್ಷದ ನಾಯಕರಾಗಿ ಡಿ.ಕೆ. ಶಿವಕುಮಾರ್ ಅವರ ಹೆಸರನ್ನು ಸಿದ್ದರಾಮಯ್ಯ ಅವರು ಸೂಚಿಸಿದರು. ಡಾ.ಜಿ.ಪರಮೇಶ್ವರ್ ಅವರು ಅನುಮೋದಿಸಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಘೋಷಿಸಿದರು. ಅದನ್ನು ಸಭೆಯು ಒಕ್ಕೊರಲಿನಿಂದ ಬೆಂಬಲಿಸಿತು.

ಇದಕ್ಕೂ ಮೊದಲು ಸಭೆಯ ಆರಂಭದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ಪ್ರಕ್ರಿಯೆಯು ಸಿದ್ದರಾಮಯ್ಯ ಅವರ ಪ್ರಸ್ತಾವನೆಯೊಂದಿಗೆ ನಡೆಯಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ ಅವರು ಪ್ರಕಟಿಸಿ, ಚಾಲನೆ ನೀಡಿದರು. ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ವಿಚಾರವನ್ನು ಎಐಸಿಸಿ ವಿವೇಚನೆಗೆ ಬಿಡಲಾಗಿದೆ ಎಂಬ ಒಂದು ಸಾಲಿನ ನಿರ್ಣಯವನ್ನು ಸಿದ್ದರಾಮಯ್ಯ ಅವರು ಮಂಡಿಸಿದರು. ಪರಮೇಶ್ವರ್ ಅವರು ಅನುಮೋದಿಸಿದರು. ಎಲ್ಲಾ ಶಾಸಕರು ಕೈ ಎತ್ತುವ ಮೂಲಕ ಇದನ್ನು ಬೆಂಬಲಿಸಿದರು.

ನಂತರ ಸಿದ್ದರಾಮಯ್ಯ, ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲ ಅವರು ಮುಖ್ಯಮಂತ್ರಿ ಕೊಠಡಿಗೆ ತೆರಳಿದರು. 10 ನಿಮಿಷಗಳ ವಿರಾಮದ ಬಳಿಕ ಸಮ್ಮೇಳನ ಸಭಾಂಗಣಕ್ಕೆ ಮೂವರೂ ಮರಳಿದ ನಂತರ ಶಾಸಕಾಂಗ ಪಕ್ಷದ ನೂತನ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿತು. ನಂತರ ನೂತನ ನಾಯಕ ಡಿ.ಕೆ.ಶಿವಕುಮಾರ್ ಅವರು ನಿರ್ಗಮಿತ ನಾಯಕ ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಅವಧಿಯ ಸೇವೆಯನ್ನು ಕೊಂಡಾಡುವ ನಿರ್ಣಯ ಮಂಡಿಸಿ, ಸಭೆಯ ಬೆಂಬಲ ಕೋರಿದರು. ಸಭೆ ಒಕ್ಕೊರಲಿನಿಂದ ಬೆಂಬಲಿಸಿತು.

ಸಭೆಯಲ್ಲಿ ವೀಕ್ಷಕರಾಗಿ ಜೈರಾಮ್ ರಮೇಶ್, ಕೆ.ಸಿ.ವೇಣುಗೋಪಾಲ್ ಮತ್ತು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಭಾಗಿಯಾಗಿದ್ದರು. ಸಭೆಗೂ ಮೊದಲು ವಿಧಾನಸೌಧ ಕೊಠಡಿಯಲ್ಲಿ ಅಜ್ಜಯ್ಯನಿಗೆ ವಿಶೇಷ ಪೂಜೆ ಸಲ್ಲಿಕೆ ಮಾಡಿಯೇ ಡಿ.ಕೆ.ಶಿವಕುಮಾರ್ ಅವರು ಆಗಮಿಸಿದ್ದರು. ಸಿಎಲ್‌ಪಿ ಸಭೆಗೆ ಹಾಜರಾದ ಎಲ್ಲಾ ಶಾಸಕರಿಗೆ ಅವರು ಕುಳಿತ ಸ್ಥಳಕ್ಕೆ ತೆರಳಿ ಡಿ.ಕೆ.ಶಿವಕುಮಾರ್ ಹಸ್ತಲಾಘ ಮಾಡಿದ್ದು ವಿಶೇಷವಾಗಿತ್ತು.

ಸರ್ಕಾರ ರಚಿಸಲು ರಾಜ್ಯಪಾಲರ ಆಹ್ವಾನ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕ ಡಿ.ಕೆ.ಶಿವಕುಮಾರ್ ಅವರಿಗೆ ಸರ್ಕಾರ ರಚಿಸಲು ಆಹ್ವಾನ ನೀಡಿದ್ದಾರೆ. ಶನಿವಾರ ಸಂಜೆ ನಡೆದ ಸಭೆಯಲ್ಲಿ ಡಿಕೆಶಿ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನು ಮತದಿಂದ ಆಯ್ಕೆ ಮಾಡಿದ ಬೆನ್ನಲ್ಲೇ, ಲೋಕಭವನಕ್ಕೆ ತೆರಳಿದ ಡಿ.ಕೆ.ಶಿವಕುಮಾರ್, ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಈ ವೇಳೆ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿ. ಪರಮೇಶ್ವರ, ಈಶ್ವರ್ ಖಂಡ್ರೆ, ಎಂ.ಬಿ.ಪಾಟೀಲ, ಕೆ.ಹೆಚ್.ಮುನಿಯಪ್ಪ ಸೇರಿ ಹಲವು ನಾಯಕರು ಉಪಸ್ಥಿತರಿದ್ದರು.

ಬುಧವಾರ ಗೋಧೂಳಿ ಲಗ್ನದಲ್ಲಿ ಪದಗ್ರಹಣ

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಜೂ.3ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆಂದು ಕೆಪಿಸಿಸಿ ಕಾರ್ಯಧ್ಯಕ್ಷ ಜಿ.ಸಿ. ಚಂದ್ರಶೇಖರ್ ಅವರು ಘೋಷಿಸಿದ್ದಾರೆ. ಲೋಕಭವನದ ಗಾಜಿನ ಮನೆಯಲ್ಲಿ ನಡೆಯುವ ಸರಳ ಸಮಾರಂಭದಲ್ಲಿ ಬುಧವಾರ ಸಂಜೆ 5.15ರ ಗೋಧೂಳಿ ಶುಭಲಗ್ನದಲ್ಲಿ ಪ್ರಮಾಣ ಸ್ವೀಕರಿಸಲಿದ್ದಾರೆ. ಈ ಮೊದಲು ವಿಧಾನಸೌಧದ ಪೂರ್ವದ್ವಾರದ ಮುಂಭಾಗದಲ್ಲಿರುವ ಭವ್ಯ ಮೆಟ್ಟಿಲುಗಳ ಮುಂದೆ ಇಲ್ಲವೇ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣವಚನ ಸ್ವೀಕರಿಸಬೇಕೆಂದು ತೀರ್ಮಾನಿಸಲಾಗಿತ್ತು. ಸಂಚಾರದಟ್ಟಣೆ ಹಿನ್ನಲೆ ಲೋಕಭವನದಲ್ಲಿ ಸ್ಥಳವನ್ನು ನಿಗದಿಗೊಳಿಸಲಾಗಿದೆ.

ಸಿಎನ್‌ಜಿ ದರ ಮತ್ತಷ್ಟು ಏರಿಕೆ : ಪ್ರತಿ ಕೆಜಿಗೆ 2 ರೂ. ಹೆಚ್ಚಳ

• ಪ್ರಜೋದಯ ವರದಿ

ಮುಂಬೈ: ಸತತ ತೈಲ ಬೆಲೆ ಏರಿಕೆ ಮಾದರಿಯಲ್ಲೇ ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ) ದರ ಕೂಡ ಮತ್ತೆ ಏರಿಕೆಯಾಗಿದೆ. ಸರ್ಕಾರಿ ಅನಿಲ ವಿತರಕ ಮಹಾನಗರ ಗ್ಯಾಸ್ ಲಿಮಿಟೆಡ್ ಸಂಸ್ಥೆಯು ಪ್ರತಿ ಒಂದು ಕೆಜಿ ಸಿಎನ್‌ಜಿಗೆ ಎರಡು ರೂ. ಗಳಷ್ಟು ಹೆಚ್ಚಳ ಮಾಡಿದೆ. ಮುಂಬೈನಲ್ಲಿ ಇಂದಿನ ಅನ್ವಯವಾಗುವಂತೆ ಹೊಸ ದರ ಘೋಷಿಸಿದೆ.

ಪರಿಷ್ಕೃತ ದರದಲ್ಲಿ ಸಿಎನ್‌ಜಿ ಬೆಲೆ ಪ್ರತಿ ಕೆಜಿಗೆ 2 ರೂ. ಹೆಚ್ಚಿಸಲಾಗಿದ್ದು, 86 ರೂ.ಗಳಿಗೆ ಏರಿಕೆಯಾಗಿದೆ. ಇನ್ನೂ ಗೃಹ ಬಳಕೆಯ ಪಿಎನ್‌ಜಿ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್‌ಗೆ 50 ಪೈಸೆ ಹೆಚ್ಚಿಸಲಾಗಿದೆ. ಪರಿಷ್ಕೃತ ದರಗಳು ಇಂದಿನಿಂದಲೇ ಜಾರಿಗೆ ಬರಲಿದೆ.

ಕಳೆದ ಮೇ 26 ರಂದು ದೆಹಲಿಯಲ್ಲೂ ಸಿಎನ್‌ಜಿ ಬೆಲೆ ಪ್ರತಿ ಕೆಜಿಗೆ 2 ರೂ. ಹೆಚ್ಚಳ ಮಾಡ ಲಾಗಿತ್ತು. ಇದಕ್ಕೂ ಮುನ್ನ ಮುಂಬೈ ವ್ಯಾಪ್ತಿಯಲ್ಲಿ ಮೇ 14 ರಂದು 2 ರೂ. ಹೆಚ್ಚಳ ಮಾಡ ಲಾಗಿತ್ತು. ಸದ್ಯ ಈಗಿನ ಪರಿಷ್ಕೃತ ದರವು ಮುಂಬೈ, ಥಾಣೆ, ನವಿ ಮುಂಬೈ ಮತ್ತು ಮುಂಬೈ ಮೆಟ್ರೋಪಾಲಿಟನ್ ಪ್ರದೇಶದ (ಎಂಎಂಆರ್) ಇತರ ಭಾಗಗಳಿಗೆ ಅನ್ವಯವಾಗಲಿದೆ.

ಸರ್ಕಾರಿ ಅನಿಲ ವಿತರಕ ಮಹಾನಗರ ಗ್ಯಾಸ್ ಲಿಮಿಟೆಡ್ (ಎಂಜಿಎಲ್) ಕಲ್ಯಾಣ್, ರಾಯಗಢ, ರತ್ನಗಿರಿ, ಲಾತೂರ್, ಉಸ್ಮಾನಾಬಾದ್, ಚಿತ್ರದುರ್ಗ ಮತ್ತು ದಾವಣಗೆರೆ ಸೇರಿ ಹಲವಾರು ನಗರಗಳಿಗೆ ಅನಿಲ ಪೂರೈಸುತ್ತದೆ.

ರಾಜ್ಯದ ಅಭಿವೃದ್ಧಿ ಬಂಡಿ ಎಳೆದೊಯ್ಯುವ ಜವಾಬ್ದಾರಿ ನಿಮ್ಮದು

ಡಿ.ಕೆ.ಶಿವಕುಮಮಾರ್‌ಗೆ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂದೇಶ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯದ ಮುಖ್ಯಮಂತ್ರಿಯಾಗಿ ಕನ್ನಡಿಗರ ಸೇವೆಯನ್ನು ಮಾಡಲು ಒದಗಿ ಬಂದಿದ್ದ ಅವಕಾಶವನ್ನು ಬಳಸಿಕೊಂಡು ಕರ್ನಾಟಕವನ್ನು ಸಮೃದ್ಧ, ಸ್ವಾವಲಂಬಿ ಮತ್ತು ಸ್ವಾಭಿಮಾನಿ ರಾಜ್ಯವನ್ನಾಗಿ ಅಭಿವೃದ್ಧಿ ಪಡಿಸಿದ ಹೆಮ್ಮೆ ನನ್ನದಾಗಿದೆ. ಈ ಅಭಿವೃದ್ಧಿಯ ಬಂಡಿಯನ್ನು ಮುಂದಕ್ಕೆ ಎಳೆದೊಯ್ಯುವ ಜವಾಬ್ದಾರಿ ಡಿ.ಕೆ.ಶಿವಕುಮಮಾರ್ ಅವರ ಹೆಗಲ ಮೇಲಿದೆ. ಅದಕ್ಕೆ ಬೇಕಾಗಿರುವ ಬದ್ಧತೆ, ಸಾಮರ್ಥ್ಯ ಮತ್ತು ಮುನ್ನೋಟ ಅವರಲ್ಲಿದೆ ಎಂದು ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿರುವ ಅವರು, ಪ್ರಿಯ ಶಿವಕುಮಾರ್, ನಿಮ್ಮಲ್ಲಿರುವ ಅದಮ್ಯವಾದ ಕ್ರಿಯಾಶೀಲತೆ, ಸಂಘಟನಾ ಚಾತುರ್ಯ ಮತ್ತು ಕಾಂಗ್ರೆಸ್ ಪಕ್ಷದ ಮೇ ಲಿನ ಸಂಶಾಯತೀತ ನಿಷ್ಠೆಯನ್ನು ಒಬ್ಬ ಸಹದ್ಯೋಗಿಯಾಗಿ ನಾನು ಸಮೀಪದಿಂದ ಗಮನಿಸಿದ್ದೇನೆ. ಇವೆಲ್ಲದರ ಸದು ಪಯೋಗ ರಾಜ್ಯದ ಜನತೆಗೆ ಆಗಲಿ ಎಂದು ಹೃತ್ಪೂರ್ವಕಾಗಿ ಹಾರೈಸುವೆ ಎಂದು ತಿಳಿಸಿದ್ದಾರೆ.

ಇಂದು ಕರ್ನಾಟಕ ತಲಾವಾರು ಆಧಾಯದಲ್ಲಿ ದೇಶದಲ್ಲಿ ಮೊದಲನೇ ಸ್ಥಾನದಲ್ಲಿರುವುದು ಮಾತ್ರವಲ್ಲ ಸಂಪತ್ತು, ಅಧಿಕಾರ ಮತ್ತು ಅವಕಾಶಗಳ ಸಮಾನ ಹಂಚಿಕೆಯಲ್ಲಿಯೂ ದೇಶಕ್ಕೆ ಮಾದರಿಯಾಗಿದೆ. ನಾವು ಪ್ರಾರಂಭಿಸಿರುವ ಪ್ರತಿಯೊಂದು ಯೋಜನೆಯನ್ನೂ ಉಳಿದ ರಾಜ್ಯಗಳು ಮಾದರಿಯಾಗಿ ಸ್ವೀಕರಿಸಿ ಅನು ಷ್ಠಾನಕ್ಕೆ ತರುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗಾತಿಯಾಗಿದೆ. ಇಡೀ ದೇಶ ಇಂದು ಆರ್ಥಿಕ ಅಭದ್ರತೆಯಲ್ಲಿ ಭೀತಿಗೊಳಗಾಗಿರುವ ಸ್ಥಿತಿಯಲ್ಲಿ ರಾಜ್ಯದ ಜನತೆ ಕೂಡಾ ಭವಿಷ್ಯದ ಬಗ್ಗೆ ಆತಂಕಿತರಾಗಿದ್ದಾರೆ. ಸಮರ್ಥ ಆಡಳಿತದ ಮೂಲಕ ಅವರಲ್ಲಿ ಭರವಸೆಯನ್ನು ಹುಟ್ಟಿಸುವ

» ನಾಲ್ಕನೇ ಪುಟದಲ್ಲಿ

ಪಕ್ಷದ ಗತವೈಭವ ಮರಳಿ ಸ್ಥಾಪಿಸಿ

ಇತ್ತೀಚಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯವಾಗಿ ಸ್ವಲ್ಪ ಹಿನ್ನಡೆ ಯಾಗಿದೆ. ನಾವು ಚುನಾವಣೆಯಲ್ಲಿ ಸೋಲಬಹುದು, ಗೆಲ್ಲಬಹುದು. ಆದರೆ, ಸೈದ್ಧಾಂತಿಕವಾಗಿ ಎಂದೂ ಸೋಲಬಾರದು. ಒಂದು ರಾಜಕೀಯ ಪಕ್ಷ ಸೈದ್ಧಾಂತಿಕವಾಗಿ ಸೋತರೆ ಆ ಪಕ್ಷ ಚುನಾ ವಣೆಯನ್ನು ಗೆಲ್ಲಲಾಗದೆ ನಾಶವಾಗುತ್ತದೆ ಂದು ನಂಬಿದವನು ನಾನು. ರಾಜ್ಯದ ಅಭಿವೃದ್ಧಿಯ ಜೊತೆಯಲ್ಲಿ ನಮ್ಮೆಲ್ಲರ ಮಾತೃಸ್ವರೂಪಿಯಾಗಿರುವ ಕಾಂಗ್ರೆಸ್ ಪಕ್ಷದ ಗತವೈಭವವನ್ನು ಮರಳಿ ಸ್ಥಾಪಿಸುವ ಹೊಣೆಗಾರಿಕೆ ಕೂಡಾ ನಮ್ಮೆಲ್ಲರ ಮೇಲಿದೆ ಎಂದು ಸಲಹೆ ನೀಡಿದ್ದಾರೆ.

ಡಿಕೆಶಿ ಸಿಎಂ: ಜಿಲ್ಲಾ ಕಾಂಗ್ರೆಸ್‌ನಲ್ಲಿ ಹೊಸ ಹುಮ್ಮಸ್ಸು

ಆಪ್ತ ನಾಯಕರಲ್ಲಿ ಗರಿಗೆದರಿದ ನಿರೀಕ್ಷೆ | ಬೆಂಗಳೂರಿಗೆ ತೆರಳಿ ಶುಭಹಾರೈಕೆ

• ಪ್ರಜೋದಯ ವರದಿ

ಹಾಸನ: ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಂದಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲು ಸಿದ್ಧರಾಗುತ್ತಿದ್ದಂತೆ ಜಿಲ್ಲೆಯ ಡಿ.ಕೆ.ಶಿ. ಬೆಂಬಲಿಗರಿಗೆ ಹೊಸ ಬಗೆಯ ಉತ್ಸಾಹ ಬಂದಂತಾಗಿದೆ.

ಡಿ.ಕೆ.ಶಿವಕುಮಾರ್ ಅವರೊಂದಿಗೆ ರಾಜಕೀಯ ಮತ್ತು ವೈಯಕ್ತಿಕವಾಗಿ ಆತ್ಮೀಯ ಬಾಂಧವ್ಯ ಹೊಂದಿರುವ ಜಿಲ್ಲೆಯ ಕಾಂಗ್ರೆಸ್ ನಾಯಕರು ಹಾಗು ಕಾರ್ಯಕರ್ತರು ಈ ಬೆಳವಣಿಗೆಯನ್ನು ಸಂಭ್ರಮದಿಂದ ಸ್ವಾಗತಿಸಿದ್ದಾರೆ. ಶಾಸಕಾಂಗ ಪಕ್ಷದ ನಾಯಕರಾಗಿ ಡಿ.ಕೆ.ಶಿವಕುಮಾರ್ ಅವರ ಹೆಸರು ಘೋಷಣೆಯಾಗುತ್ತಿದ್ದಂತೆ ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಮುಖಂಡರು ಬೆಂಗಳೂರಿಗೆ ತೆರಳಿ ಅಭಿನಂದನೆ ಸಲ್ಲಿಸಿದ್ದಾರೆ.

ಮಾಜಿ ಸಚಿವ ಬಿ.ಶಿವರಾಮ್, ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ. ಶಿವಲಿಂಗೇಗೌಡ, ಕಳೆದ ವಿಧಾನಸಭಾ ಚುನಾವಣೆಯ ಅಭ್ಯರ್ಥಿಗಳಾಗಿದ್ದ ಮುರುಳಿ ಮೋಹನ್, ಶ್ರೀಧರ್‌ಗೌಡ,

ಬನವಾಸೆ ರಂಗಸ್ವಾಮಿ ಹಾಗು ಮುಖಂಡರಾದ ಅರಸೀಕೆರೆಯ ಶಶಿಧರ್, ದಾಸರಕೊಪ್ಪಲು ರಘು ಸೇರಿ ಹಲವು ನಾಯಕರು ಡಿಕೆಶಿ ಅವರನ್ನು ಭೇಟಿಯಾಗಿ ಶುಭಾಶಯ ತಿಳಿಸಿದ್ದಾರೆ. ಸಂಸದ ಶ್ರೇಯಸ್ ಪಟೇಲ್ ಅವರು ಕೂಡ ಶುಕ್ರವಾರ ಶಿವಕುಮಾರ್ ಅವರನ್ನು ಭೇಟಿಯಾಗಿ ಶುಭಕೋರಿದ್ದರು.

ಜಿಲ್ಲೆಯಲ್ಲಿ ಡಿಕೆಶಿ ಪ್ರಭಾವ

ಕಳೆದ ವಿಧಾನಸಭಾ ಚುನಾ ವಣೆಯಲ್ಲಿ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ಅನೇಕ ಅಭ್ಯರ್ಥಿಗಳು ನೇರವಾಗಿ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರಾಗಿದ್ದರು. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಲ್ಲಿಯೂ ಅವರ ಪ್ರಭಾವ ಸ್ಪಷ್ಟವಾಗಿ ಗೋಚರಿಸಿತ್ತು. ಅದಲ್ಲದೆ, ಡಿ.ಕೆ.ಶಿವಕುಮಾರ್ ಅವರ ಸಹೋದರ ಹಾಗು ಮಾಜಿ ಸಂಸದ ಡಿ.ಕೆ.ಸುರೇಶ್ ಅವರೊಂದಿಗೂ ಜಿಲ್ಲೆಯ ಹಲವಾರು ನಾಯಕರು ಉತ್ತಮ ಬಾಂಧವ್ಯ ಹೊಂದಿದ್ದಾರೆ.

ಜಿಲ್ಲೆಗೆ ಸಚಿವ ಸ್ಥಾನ ನೀಡುವಂತೆ ಮನವಿ

ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾದ ಆಪ್ತರು ಜಿಲ್ಲೆಯಲ್ಲಿ ಪಕ್ಷ ಸಂಘಟನೆಗೆ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡುವಂತೆ ಇದೇ ವೇಳೆ ಒತ್ತಾಯಿಸಿದ್ದಾರೆ. ಅರಸೀಕೆರೆ ಕ್ಷೇತ್ರದಲ್ಲಿ ಸತತ ರಾಜಕೀಯ ಪ್ರಭಾವ ಉಳಿಸಿಕೊಂಡಿರುವ ಶಿವಲಿಂಗೇಗೌಡ ಅವರು ಪಕ್ಷ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಹೀಗಾಗಿ ಸಚಿವ ಸಂಪುಟದಲ್ಲಿ ಹಾಸನ ಜಿಲ್ಲೆಗೆ ಪ್ರಾತಿನಿಧ್ಯ ಸಿಗಬಹುದೇ ಎಂಬ ನಿರೀಕ್ಷೆ ಕಾರ್ಯಕರ್ತರಲ್ಲಿ ಹೆಚ್ಚಾಗಿದೆ.

ಈ ಕಾರಣದಿಂದಲೇ ಡಿಕೆಶಿ ಮುಖ್ಯಮಂತ್ರಿ ಆಗುತ್ತಿರುವುದು ಜಿಲ್ಲೆಯ ಕಾಂಗ್ರೆಸ್ ನಾಯಕ ರಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಅನುದಾನ, ಬಾಕಿ ಉಳಿದಿರುವ ಕಾಮಗಾರಿಗಳಿಗೆ ವೇಗ, ವಿವಿಧ ಇಲಾಖೆಗಳ ಯೋಜನೆಗಳಿಗೆ ಆದ್ಯತೆ ದೊರೆಯುವ ಸಾಧ್ಯತೆ ಇದೆ ಎಂಬ ಅಭಿಪ್ರಾಯ ಪಕ್ಷದ ವಲಯದಲ್ಲಿ ವ್ಯಕ್ತವಾಗುತ್ತಿದೆ.

ಕಾರ್ಯಕರ್ತರಲ್ಲೂ ಉತ್ಸಾಹ

ರಾಜ್ಯ ಕಾಂಗ್ರೆಸ್ ಸಂಘಟನೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಹುದ್ದೆ ಅಲಂಕರಿಸುತ್ತಿರುವುದು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರಲ್ಲೂ ಉತ್ಸಾಹ ಹೆಚ್ಚಾಗಿದೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗು ಜಿಲ್ಲಾ ಮಟ್ಟದ ರಾಜಕೀಯ ಬೆಳವಣಿಗೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಜಿಲ್ಲಾ ಕಾಂಗ್ರೆಸ್‌ಗೆ ರಾಜಕೀಯವಾಗಿ ಹೊಸ ಅವಕಾಶಗಳನ್ನು ತೆರೆದಿದ್ದು, ನಾಯಕರು ಹಾಗು ಕಾರ್ಯಕರ್ತರಲ್ಲಿ ಅಭಿವೃದ್ಧಿ ಮತ್ತು ಅಧಿಕಾರದ ಪಾಲುದಾರಿಕೆಯ ನಿರೀಕ್ಷೆಗಳನ್ನು ಮತ್ತಷ್ಟು ಹೆಚ್ಚಿಸಿದೆ.

ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಗೆ ಆಗ್ರಹ

ಜಿಲ್ಲಾಧಿಕಾರಿ ಕಚೇರಿ ಎದುರು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಕಾರ್ಮಿಕರಿಗೆ ಮಾಸಿಕ ಕನಿಷ್ಠ 36,000 ರೂ. ವೇತನ ನಿಗದಿಗೆ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಶನಿವಾರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಯಿತು.

ಈ ವೇಳೆ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು ಮಾತನಾಡಿ, ಸುಪ್ರೀಂ ಕೋರ್ಟ್‌ನ ರೆಪ್ಟಕೋಸ್ ಪ್ರಕರಣದ ತೀರ್ಪಿನ ಮಾನದಂಡಗಳ ಆಧಾರದ ಮೇಲೆ, ಪ್ರಸ್ತುತ ಬೆಲೆ ಏರಿಕೆ ಹಾಗು ಜೀವನ ನಿರ್ವಹಣಾ ವೆಚ್ಚಕ್ಕೆ ಅನುಗುಣವಾಗಿ ಕಾರ್ಮಿಕರಿಗೆ ಮಾಸಿಕ ಸರಾಸರಿ 36 ಸಾವಿರ ರೂ. ಕನಿಷ್ಠ ವೇತನ ನಿಗದಿ ಮಾಡಬೇಕೆಂದು ಒತ್ತಾಯಿಸಿದರು.

ಇತ್ತೀಚೆಗೆ ರಾಜ್ಯ ಸರ್ಕಾರ ಹೊರಡಿಸಿರುವ ಕನಿಷ್ಠ ವೇತನದ ಅಂತಿಮ ಅಧಿಸೂಚನೆ ಸ್ವಾಗತಾರ್ಹ. ಅದರಲ್ಲಿರುವ ನ್ಯೂನತೆಗಳನ್ನು ಸರಿಪಡಿಸುವಂತೆ ಆಗ್ರಹಿಸಿದ ಅವರು, ಮೇ.22 ರಂದು ಹೊರಡಿಸಲಾದ ಅಧಿಸೂಚನೆಯನ್ನು ಕರಡು ಅಧಿಸೂಚನೆ ಹೊರಡಿಸಿದ ಏಪ್ರಿಲ್ 11, 2025 ರಿಂದಲೇ ಪೂರ್ವಾನ್ವಯಿಸಿ ಜಾರಿಗೆ ತರಬೇಕು. ಅದರಿಂದ ಬಹುಸಂಖ್ಯಾತ ಕಾರ್ಮಿಕರಿಗೆ ಸಿಗಬೇಕಾದ ಹಿಂಬಾಕಿ ದೊರೆಯಲಿದೆ ಎಂದು ಒತ್ತಾಯಿಸಿದರು.

ಕನಿಷ್ಠ ವೇತನದ ಅಧಿಸೂಚನೆಯಿಂದ ಗಾರ್ಮೆಂಟ್ಸ್, ಪ್ಲಾಂಟೇಷನ್, ಸ್ಕೀಂ ನೌಕರರು, ಬೀಡಿ, ಅಗರಬತ್ತಿ ಮತ್ತು ಕೈಮಗ್ಗ ಸೇರಿ 19 ವಿಭಾಗದ ಉದ್ದಿಮೆಗಳನ್ನು ಕೈಬಿಡಲಾಗಿದೆ. ಅದರಿಂದ ಬಹುಸಂಖ್ಯಾತ ಮಹಿಳಾ ಕಾರ್ಮಿಕರು ಕನಿಷ್ಠ ವೇತನ ಹೆಚ್ಚಳದಿಂದ ವಂಚಿತರಾಗುತ್ತಿದ್ದು, ಕೂಡಲೇ ಈ ಉದ್ದಿಮೆಗಳಿಗೂ ಕನಿಷ್ಠ ವೇತನವನ್ನು ವಿಸ್ತರಿಸಿ ಅಧಿಸೂಚನೆ ಹೊರಡಿಸಬೇಕೆಂದು ಒತ್ತಾಯಿಸಿದರು.

ಕಾರ್ಮಿಕ ಸಂಹಿತೆಗಳಿಗೆ ಕರ್ನಾಟಕ ತಿದ್ದುಪಡಿ ನಿಯಮಗಳನ್ನು ಜಾರಿ ಮಾಡಬೇಕು. ಕೇಂದ್ರ ಸರ್ಕಾರ 29 ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳು ಶ್ರಮಿಕರ ಶೋಷಣೆ » ನಾಲ್ಕನೇ ಪುಟದಲ್ಲಿ

ಕಾಡಾನೆ ಭೀಮ ಪ್ರತ್ಯಕ್ಷ: ಅರಣ್ಯ ಇಲಾಖೆಯಿಂದ ಜಾಗೃತಿ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಉದೇವಾರ ಹಾಗು ಸುತ್ತಲಿನ ಗ್ರಾಮಗಳಲ್ಲಿ 'ಭೀಮ' ಹೆಸರಿನಿಂದ ಪರಿಚಿತವಾಗಿರುವ ಕಾಡಾನೆ ಮತ್ತೆ ಕಾಣಿಸಿಕೊಂಡಿದ್ದು, ಸ್ಥಳೀಯರಲ್ಲಿ ಕುತೂಹಲದ ಜೊತೆಗೆ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಕಾಡಾನೆಗಳ ಚಲನವಲನವನ್ನು ನಿಕಟ ವಾಗಿ ಗಮನಿಸುತ್ತಿರುವ ಸಕಲೇಶಪುರ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡಬನಹಳ್ಳಿ ಹಾಗು ಹೊಸನಗರ ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರು ಮತ್ತು ಕಾಫಿ ತೋಟದ ಕಾರ್ಮಿಕರಿಗೆ ಅಗತ್ಯ ಮಾಹಿತಿ ನೀಡಿದರು.

ಕಾಡಾನೆಗಳ ಸಂಚಾರ ಹೆಚ್ಚಿರುವ ಹಿನ್ನಲೆ ತೋಟಗಳಿಗೆ ತೆರಳುವ ಮುನ್ನ ಅರಣ್ಯ ಇಲಾಖೆ ಯಿಂದ ಮಾಹಿತಿ ಪಡೆದು ಸುರಕ್ಷತಾ ಕ್ರಮಗಳನ್ನು ಪಾಲಿಸುವಂತೆ ಮನವಿ ಮಾಡಿ, ಕಾಡಾನೆ ಕಂಡುಬಂದ ಪ್ರದೇಶಗಳಿಗೆ ಒಂಟಿಯಾಗಿ ತೆರಳದಂತೆ ಹಾಗೂ ರಾತ್ರಿ ವೇಳೆ ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಸೂಚಿಸಿದರು.

ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ಮಾತನಾಡಿ, ಭೀಮ ತನ್ನ ಹಳೆಯ ಗುಂಪಿ ನೊಂದಿಗೆ ಸೇರಿಕೊಂಡಿದ್ದು, ರಾತ್ರಿ ವೇಳೆಯಲ್ಲಿ ಭೀಮ ಹಾಗು ಇತರೆ

ಆನೆಗಳ ಚಲನವಲನವನ್ನು ನಿರಂತರವಾಗಿ ವೀಕ್ಷಿಸಲಾಗುತ್ತಿದೆ. ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ತಿರುಗುತ್ತಿದ್ದು, ಸಾರ್ವಜನಿ ಕರಿಗೆ ಅಗತ್ಯ ಮಾಹಿತಿಯನ್ನು ತಲುಪಿಸುವ ಮೂಲಕ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ಹೇಳಿದರು.

ಅರಣ್ಯ ಇಲಾಖೆ ಸಿಬ್ಬಂದಿ ಕಾಡಾನೆಗಳ ಸಂಚಾರದ ನಡುವೆಯೂ ಜನರಲ್ಲಿ ಅನಗತ್ಯ ಆತಂಕ ಉಂಟಾಗದಂತೆ ಜಾಗೃತಿ ಮೂಡಿಸಿ, ಮುನ್ನೆಚ್ಚರಿಕೆ ಸಂದೇಶಗಳನ್ನು ನೀಡುತ್ತಿದೆ. ಆರ್‌ಆರ್‌ಟಿ, ಇಟಿಎಫ್ ಸಿಬ್ಬಂದಿ ಜಾಗೃತಿ ಕಾರ್ಯಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇಂದು 141ನೇ ಹುಣ್ಣಿಮೆ ಕಾರ್ಯಕ್ರಮ

• ಪ್ರಜೋದಯ ವರದಿ

ಹಾಸನ: ಆದಿಚುಂಚನಗಿರಿ ಮಹಾ ಸಂಸ್ಥಾನ ಹಾಸನ ಶಾಖಾ ಮಠದ ವತಿಯಿಂದ ಭಾನುವಾರ ಸಂಜೆ 5.30ಕ್ಕೆ ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಗುರು ತೋರಿದ ದಾರಿ ತಿಂಗಳ ಮಾಮನ ತೇರು 141ನೇ ಹುಣ್ಣಿಮೆ ಕಾರ್ಯ ಕ್ರಮ ಜರುಗಲಿದೆ. ಹುಣ್ಣಿಮೆ ಕಾರ್ಯಕ್ರಮದಲ್ಲಿ ಬೆಳದಿಂಗಳ ಸಂಗೀತ ಸಂದೇಶ ಎಂಬ ವಿಷಯದ ಕುರಿತು ಆದಿಚುಂಚನಗಿರಿ ಮಹಾ ಸಂಸ್ಥಾನ ನೆಲಮಂಗಲ ಶಾಖಾ ಮಠ ನಾರಾಯಣ ಧಾಮದ ಶ್ರೀ ಸಾಯಿಕೀರ್ತಿನಾಥ ಸ್ವಾಮೀಜಿ ಅವರು ಉಪನ್ಯಾಸ ನೀಡಲಿದ್ದಾರೆ.

ಶ್ರೀ ಶಂಭುನಾಥ ಸ್ವಾಮೀಜಿ ಅವರು ಸಾನಿಧ್ಯ ವಹಿಸಲಿದ್ದಾರೆ. ಶ್ರೀಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ಟಯೋಟಾ ಶೋರೂಂನಲ್ಲಿ ಕಳವಿಗೆ ಯತ್ನ

• ಪ್ರಜೋದಯ ವರದಿ

ಹಾಸನ: ನಗರದ ಹಾಸನ ಹಾಲು ಒಕ್ಕೂಟದ ಸಮೀಪವಿರುವ ಟಯೋಟಾ ಶೋ ರೂಂ. ನಲ್ಲಿ ನಗದು ಕಳವಿಗೆ ವಿಫಲ ಯತ್ನ ನಡೆದಿದೆ.

ಮುಂಜಾನೆ ಮೂರು ಗಂಟೆ ಸುಮಾರಿಗೆ ಸೆಕ್ಯುರಿಟಿ ಕಾವಲಿದ್ದರೂ, ಮೂವರು ಮುಸುಕು ಧಾರಿಗಳು ಶೋರೂಂ ನ ಹಿಂಭಾಗದಿಂದ ಒಳ ಪ್ರವೇಶಿಸಿದಾಗ, 6 ಲಕ್ಷ ರೂ. ಹಣವಿದ್ದ ಕಬ್ಬಿಣದ ಗಟ್ಟಿಯಾದ ಬಾಕ್ಸ್‌ವೊಂದು ಸಿಕ್ಕಿದೆ. ಅಲ್ಲೇ ಒಡೆದರೆ ಶಬ್ದ ಬರಲಿದೆ, ಸಿಕ್ಕಿ ಬೀಳುವ ಸಾಧ್ಯತೆ ಇದೆ ಎಂದು ಅದನ್ನು ತಾವು ಬಂದ ಮಾರ್ಗದ ತೋಟದ ಖಾಲಿ ಪ್ರದೇಶಕ್ಕೆ ಕೊಂಡೊಯ್ದಿದ್ದಾರೆ.

ತೋಟದಲ್ಲಿ ತಿಜೋರಿ ಆಕಾರದ ಕಬ್ಬಿಣದ ಬಾಕ್ಸ್ ಒಡೆಯಲು ಸಾಕಷ್ಟು ಕಸರತ್ತು ಮಾಡಿದ್ದಾರೆ. ಆದರೆ ಅದು ಸಾಧ್ಯವಾಗಿಲ್ಲ. ಕಡೆಗೆ ಇನ್ನೇನು ಬೆಳಕಾಗಬೇಕು ಅನ್ನುವಷ್ಟರಲ್ಲಿ ಬಡಾ ವಣೆ ಠಾಣೆಯ ಗಸ್ತು ಪೊಲೀಸರು ಆಗಮಿಸಿದ್ದಾರೆ. ಈ ಸುದ್ದಿ ತಿಳಿದ ಕೂಡಲೇ ಮೂವರು ಖದೀಮರು ಬಂದ ದಾರಿಗೆ

ಸುಂಕವಿಲ್ಲ ಎಂಬಂತೆ ಅಲ್ಲಿಂದ ಕಾಲ್ಕಿತ್ತಿದ್ದಾರೆ. ನಂತರ ಪೊಲೀಸರು ಮಾಲೀಕರಿಗೆ ಸುದ್ದಿ ತಿಳಿಸಿದರು.

ಬೆಳಿಗ್ಗೆ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದಾಗ ನಗದು ಇದ್ದ ಬಾಕ್ಸ್ ಅಲ್ಲಿಯೇ ಬಿಟ್ಟು ಹೋಗಿದ್ದರಿಂದ ಮಾಲೀಕರು ನಿಟ್ಟುಸಿರು ಬಿಟ್ಟಿದ್ದಾರೆ. ಈ ಸಂಬಂಧ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಸುಕುಧಾರಿ ಖದೀಮರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಇತ್ತೀಚೆಗೆ ಕಳ್ಳತನ ಪ್ರಕರಣಗಳು ಹೆಚ್ಚಾಗ ತೊಡಗಿದ್ದು, ಅಂಗಡಿ, ಶೋ ರೂಂ ಮಾಲೀಕರು ಹಾಗು ನಿವಾಸಿಗಳು ಎಚ್ಚರಿಕೆಯಿಂದ ಇರುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್.ಮಲ್ಲೇಶಗೌಡ ಕಳವಳ

ಶಿಕ್ಷಣ ವ್ಯವಸ್ಥೆಯಲ್ಲಿ ಭಾಷಾ ವಿಷಯ ಕಡೆಗಣನೆ

• ಪ್ರಜೋದಯ ವರದಿ

ಹೆತ್ತೂರು: ಶಿಕ್ಷಣ ವ್ಯವಸ್ಥೆಯಲ್ಲಿ ಭಾಷಾ ವಿಷಯಗಳಿಗೆ ನೀಡಲಾಗುತ್ತಿದ್ದ ಮಹತ್ವ ಕಡಿಮೆ ಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡುವ ಭರದಲ್ಲಿ ಭಾಷಾ ಶಿಕ್ಷಣ ಕಡೆಗಣನೆಗೆ ಒಳಗಾಗುತ್ತಿದೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್. ಮಲ್ಲೇಶಗೌಡ ಅವರು ಹೇಳಿದರು.

ಹೆತ್ತೂರು ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಕನ್ನಡ ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಬೆಳೆಗಾರರ ಸಂಘದ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗು ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು, ಶಿಕ್ಷಕರು ಹಾಗು ವಿದ್ಯಾರ್ಥಿಗಳು ಭಾಷೆಯ

ಮಹತ್ವವನ್ನು ಅರಿತು ಅದಕ್ಕೆ ಅಗತ್ಯ ಪ್ರಾಮುಖ್ಯತೆ ನೀಡಬೇಕೆಂದು ಹೇಳಿದರು.

ವಿದ್ಯಾರ್ಥಿಗಳು ಕೇವಲ ಅಂಕ ಗಳಿಕೆಗೆ ಮಾತ್ರ ಸೀಮಿತರಾಗದೆ ಭಾಷೆ, ಸಂಸ್ಕಾರ ಹಾಗು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಭಾಷೆಯ ಮೇಲಿನ ಹಿಡಿತ ಅತ್ಯಗತ್ಯ ವಾಗಿದೆ. ಭಾಷಾ ನೈಪುಣ್ಯತೆ ವ್ಯಕ್ತಿಯ ಚಿಂತನೆ, ಅಭಿವ್ಯಕ್ತಿ ಹಾಗು ವ್ಯಕ್ತಿತ್ವ ವಿಕಾಸಕ್ಕೆ ಪೂರಕ ವಾಗಿದ್ದು, ಜೀವನದ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲು ನೆರವಾಗುತ್ತದೆಂದು ಹೇಳಿದರು.

ಕೇವಲ ಪ್ರಶ್ನೆಗಳಿಗೆ ಉತ್ತರ ಬರೆದು ಅಂಕ ಗಳಿಸುವುದೇ ಶಿಕ್ಷಣದ ಉದ್ದೇಶವಲ್ಲ. ಭಾಷೆಯಲ್ಲಿ ವಾಕ್ಯ ರೂಪದಲ್ಲಿ ತಮ್ಮ ವಿಚಾರಗಳನ್ನು

> ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಪಠ್ಯಪುಸ್ತಕಗಳ ಜ್ಞಾನ ಮಾತ್ರ ಸಾಕಾಗುವುದಿಲ್ಲ. ಜಗತ್ತಿನ ಆಗು-ಹೋಗು ಅರಿತುಕೊಳ್ಳಲು ದಿನಪತ್ರಿಕೆಗಳ ಓದು ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನವನ್ನು ವೃದ್ಧಿಸುವುದರ ಜೊತೆಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ನೆರವಾಗುತ್ತದೆ.
> -ಜೆ.ಆರ್.ಕೆಂಚೇಗೌಡ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ

ಸ್ಪಷ್ಟವಾಗಿ ವ್ಯಕ್ತಪಡಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿ ಗಳು ಬೆಳೆಸಿಕೊಳ್ಳಬೇಕು. ಚುಟುಕು ಉತ್ತರಗಳ ಸಂಸ್ಕೃತಿ ಹೆಚ್ಚುತ್ತಿರುವ ಪರಿಣಾಮ ಭಾಷೆಯ ಮೇಲಿನ ಹಿಡಿತ ಕುಗ್ಗುತ್ತಿದ್ದು, ಓದು ಹಾಗು ಬರವಣಿಗೆಯ ಅಭ್ಯಾಸ ಕಡಿಮೆಯಾಗುತ್ತಿದೆ. ಭಾಷೆಯ ಮೂಲಕವೇ ಭಾವನೆಗಳು, ಜ್ಞಾನ ಹಾಗೂ ಸಂಸ್ಕಾರಗಳ ಬೆಳವಣಿಗೆ ಸಾಧ್ಯವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಕನ್ನಡ ಭಾಷೆಯ ಬಗ್ಗೆ ಅಭಿಮಾನ ಮತ್ತು ಪ್ರೀತಿ ಬೆಳೆಸಿಕೊಳ್ಳ ಬೇಕೆಂದರು.

> ವಿದ್ಯಾರ್ಥಿಗಳ ಜೀವನದಲ್ಲಿ ಅಂಕಗಳು ಮಾತ್ರ ಯಶಸ್ಸಿನ ಮಾನದಂಡವಲ್ಲ. ಉತ್ತಮ ವ್ಯಕ್ತಿತ್ವ ಹಾಗು ಮಾನವೀಯ ಮೌಲ್ಯಗಳೇ ಜೀವನದ ನಿಜವಾದ ಸಂಪತ್ತು. ಉತ್ತಮ ಅಂಕ ಗಳನ್ನು ಗಳಿಸುವುದರ ಜೊತೆಗೆ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು.
> - ಹೆಚ್.ಬಿ.ಮದನಗೌಡ, ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮೊಬೈಲ್ ಬಳಕೆಯ ದುಷ್ಪರಿಣಾಮಗಳಿಂದ ಅನೇಕ ವಿದ್ಯಾರ್ಥಿಗಳು » ನಾಲ್ಕನೇ ಪುಟದಲ್ಲಿ

ಪ್ರಾಚೀನ ಭಾರತದ ದೇವಾಲಯ ಆರ್ಥಿಕತೆ



ವೀಕೆಂಡ್ ವಿತ್ ಮೋಹನ್

ದಕ್ಷಿಣ ಭಾರತದ ಇತಿಹಾಸ'ದಲ್ಲಿ ವಿಜಯನಗರ ಸಾಮ್ರಾಜ್ಯ ಒಂದು ಮಹತ್ವದ ನಾಗರಿಕ ಶಕ್ತಿಯಾಗಿತ್ತು. ಕ್ರಿ.ಶ. 1336ರಲ್ಲಿ ಹರಿಹರ ಮತ್ತು ಬುಕ್ಕರಾಯರು ಸ್ಥಾಪಿಸಿದ ಈ ಸಾಮ್ರಾಜ್ಯವು ಕೇವಲ ಸೈನಿಕ ಅಥವಾ ರಾಜಕೀಯ ಶಕ್ತಿಯಾಗಿರಲಿಲ್ಲ, ಅದು ದೇವಾಲಯ ಆಧಾರಿತ ಆರ್ಥಿಕತೆ, ವ್ಯಾಪಾರ, ಕೃಷಿ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳ ಮಹಾಕೇಂದ್ರವಾಗಿತ್ತು.

ಭಾರತದಲ್ಲಿ ಸಾವಿರಾರು ವರ್ಷಗಳ ಕಾಲ ದೇವಾಲಯಗಳು ಕೇವಲ ಪೂಜಾ ಸ್ಥಳಗಳಾಗಿರಲಿಲ್ಲ, ಅವು ಆರ್ಥಿಕ ಸಂಸ್ಥೆಗಳು, ಶಿಕ್ಷಣ ಕೇಂದ್ರಗಳು, ಉದ್ಯೋಗ ಸೃಷ್ಟಿಕೇಂದ್ರಗಳು, ಸಾಂಸ್ಕೃತಿಕ ಅಕಾಡೆಮಿಗಳು, ಅನ್ನದಾನ ವ್ಯವಸ್ಥೆಗಳು ಹಾಗೂ ಸ್ಥಳೀಯ ಆಡಳಿತದ ಕೇಂದ್ರಗಳಾಗಿದ್ದವು.

ಆಧುನಿಕ ಬ್ಯಾಂಕ್‌ಗಳು ಮತ್ತು ಕಾರ್ಪೊರೇಟ್ ವ್ಯವಸ್ಥೆಗಳು ಹುಟ್ಟುವ ಮೊದಲು ದೇವಾಲಯಗಳು ಭಾರತೀಯ ಸಮಾಜ ಮತ್ತು ಆರ್ಥಿಕತೆಯ ಪ್ರಮುಖ ಆಧಾರವಾಗಿದ್ದವು. ಇತಿಹಾಸಕಾರರ ಪ್ರಕಾರ, ಕ್ರಿ.ಶ. ಒಂದನೇ ಶತಮಾನದಿಂದ 17ನೇ ಶತಮಾನದವರೆಗೆ ಭಾರತದ ಒಟ್ಟು ಆರ್ಥಿಕತೆಯ ದೊಡ್ಡ ಭಾಗ ದೇವಾಲಯ ಆಧಾರಿತ ವ್ಯವಸ್ಥೆಗಳ ಸುತ್ತ ತಿರುಗುತ್ತಿತ್ತು.

ಅನೇಕ ಪ್ರದೇಶಗಳಲ್ಲಿ ಸ್ಥಳೀಯ ಆರ್ಥಿಕ ಚಟುವಟಿಕೆಗಳ ಶೇ.20ರಿಂದ 30ರವರೆಗೆ ದೇವಾಲಯಗಳಿಗೆ ನೇರ ಅಥವಾ ಪರೋಕ್ಷ ಸಂಬಂಧವಿತ್ತು. ಚೋಳರು, ಪಾಂಡ್ಯರು, ಹೊಯ್ಸಳರು, ಕಾಕತೀಯರು ಮತ್ತು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ದೇವಾಲಯಗಳು ಸ್ಥಳೀಯ ಆರ್ಥಿಕ ಕೇಂದ್ರಗಳಾಗಿದ್ದವು.

ರಾಜರುಗಳು ಭೂಮಿಯನ್ನು ದಾನ ಮಾಡುತ್ತಿದ್ದರು, ವ್ಯಾಪಾರಿಗಳು ಹಣ ನೀಡುತ್ತಿದ್ದರು, ರೈತರು ಉತ್ಪನ್ನಗಳನ್ನು ಪೂರೈಸುತ್ತಿದ್ದರು, ಕಲಾವಿದರು ದೇವಾಲಯ ನಿರ್ಮಾಣದಲ್ಲಿ ಪಾಲ್ಗೊಳ್ಳುತ್ತಿದ್ದರು. ದೇವಾಲಯಗಳ ಸುತ್ತ ಮಾರುಕಟ್ಟೆಗಳು, ಪಟ್ಟಣಗಳು ಮತ್ತು ವಸತಿ ಪ್ರದೇಶಗಳಿದ್ದವು.

ತಮಿಳುನಾಡಿನ ಬೃಹದೇಶ್ವರ ದೇವಾಲಯವು, ದೇವಾಲಯ ಆರ್ಥಿಕತೆಯ ಅತ್ಯಂತ ದೊಡ್ಡ ಉದಾಹರಣೆಗಳಲ್ಲಿ ಒಂದಾಗಿದೆ. ರಾಜರಾಜ ಚೋಳ ನಿರ್ಮಿಸಿದ ಈ ದೇವಾಲಯ ಸಾವಿರಾರು ಎಕರೆ ಕೃಷಿಭೂಮಿಯನ್ನು ಹೊಂದಿತ್ತು. ಶಾಸನಗಳ ಪ್ರಕಾರ, ನೂರಾರು ಅರ್ಚಕರು, ಸಂಗೀತಗಾರರು, ನರ್ತಕಿಯರು, ಅಡುಗೆಗಾರರು, ಲೆಕ್ಕಾಧಿಕಾರಿಗಳು ಮತ್ತು ಕಾವಲುಗಾರರು ಅಲ್ಲಿ ಕೆಲಸ ಮಾಡುತ್ತಿದ್ದರು.

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ಒಂದು ಮಹತ್ವದ ನಾಗರಿಕ ಶಕ್ತಿಯಾಗಿತ್ತು. ಕ್ರಿ.ಶ.1336ರಲ್ಲಿ ಹರಿಹರ ಮತ್ತು ಬುಕ್ಕರಾಯರು ಸ್ಥಾಪಿಸಿದ ಈ ಸಾಮ್ರಾಜ್ಯವು ಕೇವಲ ಸೈನಿಕ ಅಥವಾ ರಾಜಕೀಯ ಶಕ್ತಿಯಾಗಿರಲಿಲ್ಲ, ಅದು ದೇವಾಲಯ ಆಧಾರಿತ ಆರ್ಥಿಕತೆ, ವ್ಯಾಪಾರ, ಕೃಷಿ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳ ಮಹಾಕೇಂದ್ರವಾಗಿತ್ತು.

ವಿಶೇಷವಾಗಿ ಹಂಪಿ ನಗರವು ಆ ಕಾಲದ ವಿಶ್ವದ ಶ್ರೀಮಂತ ನಗರಗಳಲ್ಲಿ ಒಂದಾಗಿತ್ತು. ಇಂದಿನ ಕಾಲದಲ್ಲಿ ಪ್ರವಾಸೋದ್ಯಮ ನಗರಗಳಿಗೆ ಹೇಗೆ ಆದಾಯ ತರುತ್ತದೆಯೋ, ಅದೇ ರೀತಿಯಲ್ಲಿ ದೇವಾಲಯ ಯಾತ್ರೆಗಳು ವಿಜಯನಗರ ಕಾಲದಲ್ಲಿ ವ್ಯಾಪಾರ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಜೀವ ತುಂಬುತ್ತಿದ್ದವು. ಹಂಪಿ ವಿರೂಪಾಕ್ಷ ದೇವಾಲಯ, ವಿಠ್ಠಲನ ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಷ್ಟೇ ಅಲ್ಲ, ವ್ಯಾಪಾರ, ಉದ್ಯೋಗ ಮತ್ತು ಸಾಮಾಜಿಕ ವ್ಯವಸ್ಥೆಗಳ ಕೇಂದ್ರಗಳಾಗಿದ್ದವು.

ವಿದೇಶಿ ಪ್ರವಾಸಿಗರಾದ ಡೊಮಿಂಗೋ ಪಾಯ್ಸ್, ಫರ್ನಾಂ ನೂನಿಸ್ ಮತ್ತು ನಿಕ್ಕೊಲೊ ಡಿ ಕಾಂಟಿ ಅವರ ಪ್ರವಾಸ ವರ್ಣನೆಗಳ ಪ್ರಕಾರ, ಹಂಪಿಯ ಮಾರುಕಟ್ಟೆಗಳು ವಿಶ್ವದ ಅತ್ಯಂತ ಶ್ರೀಮಂತ ಮಾರುಕಟ್ಟೆಗಳಲ್ಲಿ ಒಂದಾಗಿದ್ದವು. ದೇವಾಲಯಗಳ ಸುತ್ತಲಿನ ಬೀದಿಗಳಲ್ಲಿ ವಜ್ರ, ಮುತ್ತು, ಚಿನ್ನ, ಕುದುರೆ, ರೇಷ್ಮೆ, ಸುಗಂಧ ದ್ರವ್ಯಗಳು ಮತ್ತು ಮಸಾಲೆ ಪದಾರ್ಥಗಳ ವ್ಯಾಪಾರ ನಡೆಯುತ್ತಿತ್ತು.

ವಿಠ್ಠಲ ದೇವಾಲಯದ ಪ್ರಸಿದ್ಧ ಕಲ್ಲಿನ ರಥ ಮತ್ತು ಸಂಗೀತ ಸ್ತಂಭಗಳು ಕೇವಲ ಧಾರ್ಮಿಕ ಸಂಕೇತಗಳಲ್ಲ; ಅವು ವಿಜಯನಗರ ಸಾಮ್ರಾಜ್ಯದ ಆರ್ಥಿಕ ಶಕ್ತಿ ಮತ್ತು ತಾಂತ್ರಿಕ ಸಾಮರ್ಥ್ಯದ ಸಂಕೇತಗಳಾಗಿವೆ. ಇಂತಹ ದೇವಾಲಯಗಳನ್ನು ನಿರ್ಮಿಸಲು ಸಾವಿರಾರು ಶಿಲ್ಪಿಗಳು, ಕಾರ್ಮಿಕರು, ಎಂಜಿನಿಯರ್‌ಗಳು ಮತ್ತು ಕಲಾವಿದರು ದಶಕಗಳ ಕಾಲ ಕೆಲಸ ಮಾಡುತ್ತಿದ್ದರು.



ಹಂಪಿಯ ಪ್ರಸಿದ್ಧ ಹಂಪಿ ಬಜಾರ್ ಸುಮಾರು ಒಂದು ಕಿಲೋಮೀಟರ್ ಉದ್ದವಿತ್ತು. ಯಾತ್ರಾರ್ಥಿಗಳು ಮತ್ತು ವ್ಯಾಪಾರಿಗಳು ದೇಶದ ವಿವಿಧ ಭಾಗಗಳಿಂದ ಬರುತ್ತಿದ್ದರು. ದೇವಾಲಯಗಳಿಗೆ ಬರುವ ಭಕ್ತರ ಸಂಖ್ಯೆ ಹೆಚ್ಚಿದಂತೆ ಆಹಾರ, ವಸತಿ, ಸಾರಿಗೆ, ಹೂವು, ಪೂಜಾ ಸಾಮಗ್ರಿ ಮತ್ತು ವಸ್ತ್ರಗಳಿಗೆ ಬೇಡಿಕೆ ಹೆಚ್ಚುತ್ತಿತ್ತು.

ಇದರಿಂದ ಸಾವಿರಾರು ಜನರಿಗೆ ಉದ್ಯೋಗ ದೊರೆಯುತ್ತಿತ್ತು, ವಿಜಯ ನಗರ ಸಾಮ್ರಾಜ್ಯದ ಕಾಲದಲ್ಲಿ ದೇವಾಲಯ ಗಳಿಗೆ ದೊಡ್ಡ ಪ್ರಮಾಣದಲ್ಲಿ ಭೂಮಿ ಗಳನ್ನು ದಾನ ಮಾಡಲಾಗುತ್ತಿತ್ತು. ಈ ಭೂಮಿಗಳಿಂದ ಬರುವ ಕೃಷಿ ಆದಾಯವನ್ನು ದೇವಾಲಯ ನಿರ್ವಹಣೆ, ಅನ್ನದಾನ, ಶಿಕ್ಷಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬಳಸಲಾಗುತ್ತಿತ್ತು.

ತಿರುವನಂತಪುರದ ಅನಂತ ಪದ್ಮನಾಭ ದೇವಾಲಯ ಭಾರತದ ದೇವಾಲಯ ಸಂಪತ್ತಿನ ಮತ್ತೊಂದು ದೊಡ್ಡ ಉದಾಹರಣೆ. 2011ರಲ್ಲಿ ದೇವಾಲಯದ ಗುಪ್ತ ಕೊಠಡಿಗಳನ್ನು ತೆರೆಯುವಾಗ ಅಪಾರ ಪ್ರಮಾಣದ ಚಿನ್ನ, ವಜ್ರ, ರತ್ನಾಭರಣಗಳು ಮತ್ತು ಪುರಾತನ ನಾಣ್ಯಗಳು ಪತ್ತೆಯಾಗಿದ್ದವು.

ಕೆಲವು ಅಂದಾಜುಗಳ ಪ್ರಕಾರ ಅದರ ಮೌಲ್ಯ ರೂ.1.5 ಲಕ್ಷ ಕೋಟಿ ರುಪಾಯಿಗಳಿಗಿಂತಲೂ ಹೆಚ್ಚಿರಬಹುದು. ಸೋಮನಾಥ ದೇವಾಲಯ ಪ್ರಾಚೀನ ಭಾರತದ ಅತ್ಯಂತ ಶ್ರೀಮಂತ ದೇವಾಲಯಗಳಲ್ಲಿ ಒಂದಾಗಿತ್ತು. ಪರ್ಷಿಯನ್ ದಾಖಲೆಗಳ ಪ್ರಕಾರ, ದೇವಾಲಯದಲ್ಲಿ ಅಪಾರ ಪ್ರಮಾಣದ ಚಿನ್ನ, ಬೆಳ್ಳಿ ಮತ್ತು ರತ್ನಗಳು ಸಂಗ್ರಹವಾಗಿದ್ದವು.

ಇಸ್ಲಾಮಿಕ್ ದಾಳಿಕೋರ ಮೊಹಮ್ಮದ್ ಗಜ್ನಿ 1025ರಲ್ಲಿ ದಾಳಿ ನಡೆಸಿ ಅಪಾರ ಸಂಪತ್ತನ್ನು ದೋಚಿಕೊಂಡು ಹೋಗಿದ್ದ. ಭಾರತದ ದೇವಾಲಯ ಆರ್ಥಿಕತೆಯ ಮೇಲೆ ಇಸ್ಲಾಮಿಕ್ ದಾಳಿಗಳು ದೊಡ್ಡ ಪರಿಣಾಮ ಬೀರಿದವು. ವಿಶೇಷವಾಗಿ 11ನೇ ಶತಮಾನದಿಂದ 17ನೇ ಶತಮಾನದವರೆಗೆ ಅನೇಕ ಶ್ರೀಮಂತ ದೇವಾಲಯಗಳು ಅವರ ದಾಳಿಗೆ ಗುರಿಯಾದವು.

ದಾಳಿಗಳ ಪ್ರಮುಖ ಉದ್ದೇಶಗಳಲ್ಲಿ ಧಾರ್ಮಿಕ, ರಾಜಕೀಯ ಹಾಗೂ ಆರ್ಥಿಕ ಕಾರಣಗಳು ಸೇರಿದ್ದವು. 1193ರಲ್ಲಿ ಉತ್ತರ ಭಾರತದ ಅನೇಕ ದೇವಾಲಯಗಳು ಹಾಗೂ ಶಿಕ್ಷಣ ಕೇಂದ್ರಗಳು ಇಸ್ಲಾಮಿಕ್ ದಾಳಿಕೋರರ ದಾಳಿಗಳ ನಂತರ ನಾಶವಾದವು. 1296 ರಿಂದ 1316 ನಡುವೆ ಅಲ್ಲಾವುದ್ದೀನ್ ಖಿಲ್ಜಿ ಕಾಲದಲ್ಲಿ ಗುಜರಾತ್ ಮತ್ತು ದಕ್ಷಿಣ ಭಾರತದ ಶ್ರೀಮಂತ ದೇವಾಲಯಗಳ ಮೇಲೆ ದಾಳಿಗಳು ನಡೆದವು.

1565 ರಲ್ಲಿ ನಡೆದ ತಾಳಿಕೋಟೆ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯದ ಹಂಪಿ ನಗರ ಹಾಗೂ ಅನೇಕ ದೇವಾಲಯಗಳು ನಾಶಗೊಂಡವು. 1669ರಲ್ಲಿ ಔರಂಗಜೇಬ್, ಕಾಶಿ ವಿಶ್ವನಾಥ ಮತ್ತು ಮಥುರಾದ ದೇವಾಲಯಗಳನ್ನು ಧ್ವಂಸ ಗೊಳಿಸಲು ಆದೇಶಿಸಿದ್ದಾನೆ ಎಂದು ಪರ್ಷಿಯನ್ ದಾಖಲೆಗಳಲ್ಲಿ ಉಲ್ಲೇಖಗಳಿವೆ.

1565ರ ತಾಳಿಕೋಟೆ ಯುದ್ಧದ ನಂತರ ಹಂಪಿಯ ನಾಶವು ಭಾರತೀಯ ದೇವಾಲಯ ಆರ್ಥಿಕತೆಯ ಮೇಲೆ ಭಾರೀ ಪರಿಣಾಮ ಬೀರಿತು. ವಿದೇಶಿ ಪ್ರವಾಸಿಗರ ಪ್ರಕಾರ, ಆ ಕಾಲದ ಹಂಪಿ ವಿಶ್ವದ ಶ್ರೀಮಂತ ನಗರಗಳಲ್ಲಿ ಒಂದಾಗಿತ್ತು. ದೇವಾಲಯಗಳು, ಮಾರುಕಟ್ಟೆಗಳು ಮತ್ತು ವ್ಯಾಪಾರ ಕೇಂದ್ರಗಳು ನಾಶವಾದ ಪರಿಣಾಮ ದಕ್ಷಿಣ ಭಾರತದ ವ್ಯಾಪಾರ ವ್ಯವಸ್ಥೆಗೆ ದೊಡ್ಡ ಹೊಡೆತ ಬಿತ್ತು. ಇತಿಹಾಸಕಾರರ ಅಂದಾಜುಗಳ ಪ್ರಕಾರ, ಶತಮಾನಗಳ ಕಾಲ ದೇವಾಲಯಗಳಿಂದ ದೋಚಲ್ಪಟ್ಟ ಚಿನ್ನ, ಬೆಳ್ಳಿ ಮತ್ತು ರತ್ನಗಳ ಒಟ್ಟು ಮೌಲ್ಯವನ್ನು ಇಂದಿನ ಹಣದಲ್ಲಿ ಲೆಕ್ಕ ಹಾಕಿದರೆ ಲಕ್ಷಾಂತರ ಕೋಟಿ ರುಪಾಯಿಗಳಿಗೆ ಸಮನಾಗಿರ ಬಹುದು.

ನಿಖರ ಅಂಕಿ-ಅಂಶಗಳು ಲಭ್ಯವಿಲ್ಲದಿದ್ದರೂ ದೇವಾಲಯ ಗಳು ಆ ಕಾಲದ ಆರ್ಥಿಕ ಖಜಾನೆಗಳಾಗಿದ್ದವು ಎಂಬುದು ಸ್ಪಷ್ಟ. ಇಸ್ಲಾಮಿಕ್ ದಾಳಿಗಳ ನಂತರ ಬ್ರಿಟಿಷರ ವಸಾಹತುಶಾಹಿಯೂ ಭಾರತೀಯ ದೇವಾಲಯ ಆರ್ಥಿಕತೆಯನ್ನು ದುರ್ಬಲಗೊಳಿಸಿತು. ಈಸ್ಟ್ ಇಂಡಿಯಾ ಕಂಪನಿ, ಭಾರತ ದಲ್ಲಿ ಅಧಿಕಾರ ಸ್ಥಾಪಿಸಿದ ನಂತರ ದೇವಾ ಲಯಗಳ ಭೂಮಿ ಮತ್ತು ಆದಾ ಯದ ಮೇಲೆ ನಿಯಂತ್ರಣ ಸಾಧಿಸಲು ಆರಂಭಿಸಿತು.

ಅನೇಕ ದೇವಾಲಯಗಳ ತೆರಿಗೆಮುಕ್ತ ಭೂಮಿಗಳನ್ನು ವಶಪಡಿಸಿಕೊಳಲಾಯಿತು, ದೇವಾಲಯಗಳಿಗೆ ದೊರೆಯುತ್ತಿದ್ದ ಸಾಂಪ್ರದಾಯಿಕ ದೇಣಿಗೆ ವ್ಯವಸ್ಥೆಗಳು ಕುಗ್ಗಿದವು. 18ನೇ ಮತ್ತು 19ನೇ ಶತಮಾನಗಳಲ್ಲಿ ಬ್ರಿಟಿಷರು ಭಾರತದ ವಿವಿಧ ಭಾಗಗಳಿಂದ ಅಪಾರ ಪ್ರಮಾಣದ ಚಿನ್ನ, ಬೆಳ್ಳಿ, ವಜ್ರಗಳು, ಶಿಲ್ಪಕಲೆಗಳು ಮತ್ತು ಕಲಾಕೃತಿಗಳನ್ನು ಇಂಗ್ಲೆಂಡ್‌ಗೆ ಕೊಂಡೊಯ್ದರು.

ಪ್ರಸಿದ್ಧ ಕೊಹಿನೂರ್ ವಜ್ರವೂ ಸಹ ಬ್ರಿಟಿಷರ ಕೈ ಸೇರಿತು. ಕೆಲ ಆರ್ಥಿಕ ಇತಿಹಾಸಕಾರರ ಪ್ರಕಾರ, 1757ರಿಂದ 1947ರವರೆಗೆ ಬ್ರಿಟಿಷರು ಭಾರತದಿಂದ ಕೊಂಡೊಯ್ದ ಒಟ್ಟು ಸಂಪತ್ತಿನ ಮೌಲ್ಯ ಇಂದಿನ ಹಣದಲ್ಲಿ ಸಾವಿರ ಕೋಟಿ ಡಾಲರ್‌ಗಳಿಗೆ ಸಮನಾಗಿರಬಹುದು.

ಅರ್ಥಶಾಸ್ತ್ರಜ್ಞೆ ಉತ್ಸಾ ಪಟ್ನಾಯಕ್ ಅವರ ಅಧ್ಯಯನದ ಪ್ರಕಾರ, ಬ್ರಿಟಿಷರು ಭಾರತದಿಂದ ಸುಮಾರು 45 ಸಾವಿರ ಕೋಟಿ ಮೌಲ್ಯದ ಸಂಪತ್ತನ್ನು ಹೊರ ತೆಗೆದಿದ್ದಾರೆ ಎಂಬ ಅಂದಾಜು ಇದೆ. ಈ ಸಂಪತ್ತಿನಲ್ಲಿ ದೇವಾಲಯ ಆಧಾರಿತ ಕೃಷಿ ಆದಾಯ, ತೆರಿಗೆ ಮತ್ತು ವ್ಯಾಪಾರ ಸಂಪತ್ತು ಕೂಡ ಸೇರಿದ್ದವು. ದೇವಾಲಯಗಳ ಭೂಮಿ ವಶಪಡಿಸಿಕೊಳ್ಳುವುದು, ಸಂಪ್ರದಾಯಿಕ ವ್ಯಾಪಾರ ವ್ಯವಸ್ಥೆಗಳ ಕುಸಿತ ಮತ್ತು ಸ್ಥಳೀಯ ಕೈಗಾರಿಕೆಗಳ ನಾಶದಿಂದ ದೇವಾಲಯ ಆರ್ಥಿಕತೆಯ ಶಕ್ತಿ ನಿಧಾನವಾಗಿ ಕುಗ್ಗಿತು.

ಇಂದಿಗೂ ದೇವಾಲಯಗಳ ಆರ್ಥಿಕತೆಯ ಪ್ರಭಾವ ಬಹಳ ದೊಡ್ಡದು, ತಿರುಪತಿ ವೆಂಕಟೇಶ್ವರ ದೇವಾಲಯ ವಿಶ್ವದ ಶ್ರೀಮಂತ ಧಾರ್ಮಿಕ

ವಿಶೇಷವಾಗಿ ಹಂಪಿ ನಗರವು ಆ ಕಾಲದ ವಿಶ್ವದ ಶ್ರೀಮಂತ ನಗರಗಳಲ್ಲಿ ಒಂದಾಗಿತ್ತು. ಇಂದಿನ ಕಾಲದಲ್ಲಿ ಪ್ರವಾಸೋದ್ಯಮ ನಗರಗಳಿಗೆ ಹೇಗೆ ಆದಾಯ ತರುತ್ತದೆಯೋ, ಅದೇ ರೀತಿಯಲ್ಲಿ ದೇವಾಲಯ ಯಾತ್ರೆಗಳು ವಿಜಯನಗರ ಕಾಲದಲ್ಲಿ ವ್ಯಾಪಾರ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಜೀವ ತುಂಬುತ್ತಿದ್ದವು. ಹಂಪಿ ವಿರೂಪಾಕ್ಷ ದೇವಾಲಯ, ವಿಠ್ಠಲನ ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಷ್ಟೇ ಅಲ್ಲ, ವ್ಯಾಪಾರ, ಉದ್ಯೋಗ ಮತ್ತು ಸಾಮಾಜಿಕ ವ್ಯವಸ್ಥೆಗಳ ಕೇಂದ್ರಗಳಾಗಿದ್ದವು.

ಸಂಸ್ಥೆಗಳಲ್ಲಿ ಒಂದಾಗಿದೆ, ವಾರ್ಷಿಕವಾಗಿ ರೂ.3000 ಕೋಟಿ ರಿಂದ ರೂ.4000 ಕೋಟಿ ವರೆಗೆ ಆದಾಯ ಬರುತ್ತದೆ. ಶಿರಡಿ ಸಾಯಿಬಾಬ ದೇವಸ್ಥಾನ, ಜಮ್ಮುವಿನ ವೈಷ್ಣೋದೇವಿ ದೇವಾಲಯ, ಉತ್ತರಾ ಖಂಡದ ಕೇದಾರನಾಥ ದೇವಾಲಯ, ಅಯೋಧ್ಯೆಯ ರಾಮ ಮಂದಿರ, ಶಬರಿಮಲೆ, ಅಸ್ಸಾಮಿನ ಕಾಮಾಕ್ಯ ದೇವಾಲಯ ಮತ್ತು ಪುರಿಯ ಜಗನ್ನಾಥ ದೇವಾಲಯಗಳೂ ಸಾವಿರಾರು ಕೋಟಿ ರುಪಾಯಿ ಮೌಲ್ಯದ ಆರ್ಥಿಕ ಚಟುವಟಿಕೆಗಳನ್ನು ಸೃಷ್ಟಿಸುತ್ತವೆ.

ಭಾರತದ ಧಾರ್ಮಿಕ ಪ್ರವಾಸೋದ್ಯಮ ಉದ್ಯಮದ ಮೌಲ್ಯವು ಇಂದಿಗೆ ಲಕ್ಷಾಂತರ ಕೋಟಿ ರುಪಾಯಿಗಳಷ್ಟಿದೆ, ಕೋಟ್ಯಂತರ ಭಕ್ತರು ದೇವಾಲಯಗಳಿಗೆ ಭೇಟಿ ನೀಡುವುದರಿಂದ ಹೋಟೆಲ್, ಸಾರಿಗೆ, ಹೂವಿನ ವ್ಯಾಪಾರ, ಆಹಾರ, ಕೈಗಾರಿಕೆ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಿಗೆ ದೊಡ್ಡ ಮಟ್ಟದ ಉದ್ಯೋಗ ಸೃಷ್ಟಿಯಾಗುತ್ತಿದೆ.

ಇತಿಹಾಸದ ದೊಡ್ಡ ಸತ್ಯ ಏನೆಂದರೆ, ದೇವಾಲಯಗಳು ಕೇವಲ ಧಾರ್ಮಿಕ ಕಟ್ಟಡಗಳಲ್ಲ, ಅವು ಭಾರತೀಯ ಸಮಾಜದ ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಕೇಂದ್ರಗಳಾಗಿದ್ದವು. ಕೃಷಿ, ಶಿಕ್ಷಣ, ವ್ಯಾಪಾರ, ಅನ್ನದಾನ, ಕಲೆ, ಸಂಗೀತ ಮತ್ತು ಸಮಾಜ ಸೇವೆಯ ಮೂಲಕ ದೇವಾಲಯಗಳು ಶತಮಾನಗಳ ಕಾಲ ಭಾರತೀಯ ನಾಗರಿಕತೆಯನ್ನು ಉಳಿಸಿವೆ.

- ಮೋಹನ್ ವಿಶ್ವ



ನಿಯಮಿತವಾಗಿ ಲಿಚಿ ಹಣ್ಣು ಸೇವಿಸುವುದರಿಂದ ಆರೋಗ್ಯಕ್ಕೆ ಹಲವು ಪ್ರಯೋಜನಗಳು

ದೇಹದ ತೂಕ ನಿರ್ವಹಣೆಯ ಜೊತೆಗೆ ರೋಗನಿರೋಧಕ ಶಕ್ತಿ ಹಾಗೂ ಚರ್ಮದ ಕಾಂತಿ ಹೆಚ್ಚಿಸಲು ನಿಯಮಿತವಾಗಿ ಲಿಚಿ ಹಣ್ಣುಗಳ ಸೇವನೆ ಒಳ್ಳೆಯದು. ಇದರೊಂದಿಗೆ ಇನ್ನೂ ಯಾವೆಲ್ಲಾ ಪ್ರಯೋಜನಗಳಿವೆ ಎಂಬುದನ್ನು ತಿಳಿಯೋಣ.

ಲಿಚಿ. ಸಿಹಿ ಹಾಗೂ ರಸಭರಿತ ಉಷ್ಣವಲಯದ ಹಣ್ಣು. ಈ ಹಣ್ಣು ಗುಲಾಬಿ ಬಣ್ಣದ ಹೊರಗಿನ ಸಿಪ್ಪೆ ಹಾಗೂ ಬಿಳಿ ಬಣ್ಣದ ತಿರುಳು ಹೊಂದಿದೆ. ಮುಖ್ಯವಾಗಿ, ಬೇಸಿಗೆಯಲ್ಲಿ ಲಭ್ಯವಿರುವ ಈ ಹಣ್ಣಿನಲ್ಲಿ ವಿಟಮಿನ್ ಸಿ ಹಾಗೂ ಆ್ಯಂಟಿಆಕ್ಸಿಡೆಂಟ್‌ಗಳು ಹೇರಳವಾಗಿವೆ. ರೋಗನಿರೋಧಕ ಶಕ್ತಿ ಹೆಚ್ಚಿಸಲು ಹಾಗೂ ದೇಹವನ್ನು ಹೈಡ್ರೀಕರಿಸಲು ತುಂಬಾ ಒಳ್ಳೆಯದೆಂದು ಆರೋಗ್ಯ ತಜ್ಞರು ತಿಳಿಸುತ್ತಾರೆ.

ದೇಹದ ಉಷ್ಣಾಂಶವನ್ನು ಕಡಿಮೆ ಮಾಡುವುದಲ್ಲದೆ, ದೇಹಕ್ಕೆ ಅಗತ್ಯವಾದ ಪೋಷಕಾಂಶಗಳನ್ನೂ ಸಹ ಲಿಚಿ ಒದಗಿಸುತ್ತದೆ. ಮೇ ಹಾಗೂ ಜೂನ್‌ನಲ್ಲಿ ಯಥೇಚ್ಛವಾಗಿ ಸಿಗುವ ಈ ಹಣ್ಣುಗಳನ್ನು ನಿಮ್ಮ ಆಹಾರದ ಭಾಗವಾಗಿಸಿದರೆ ಹಲವು ಆರೋಗ್ಯ ಪ್ರಯೋಜನಗಳಿವೆ.

ಪ್ರಮುಖವಾಗಿ ಲಿಚಿ ಒತ್ತಡ, ಮಾಲಿನ್ಯದಂತಹ ಆಧುನಿಕ ಜೀವನಶೈಲಿಗೆ ಸಂಬಂಧಿಸಿದ ಸಮಸ್ಯೆಗಳಿಂದ ರಕ್ಷಿಸುತ್ತದೆ. ಲಿಚಿಯನ್ನು ಹಣ್ಣಾಗಿ ಮಾತ್ರವಲ್ಲದೆ ಜ್ಯೂಸ್ ಹಾಗೂ ಸಲಾಡ್‌ಗಳ ರೂಪದಲ್ಲಿಯೂ ಸೇವನೆ ಮಾಡಬಹುದು. ಚರ್ಮದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಬಯಸುವವರಿಗೆ ಲಿಚಿ ಅದ್ಭುತ ಪರಿಹಾರ ಎನ್ನುವುದು ತಜ್ಞರ ಮಾತು.

ಹೃದಯದ ಆರೋಗ್ಯಕ್ಕೆ ಅತ್ಯುತ್ತಮ: ಲಿಚಿ ಹಣ್ಣಿನಲ್ಲಿರುವ ಪೊಟ್ಯಾಸಿಯಮ್ ರಕ್ತದೊತ್ತಡ ನಿಯಂತ್ರಣದಲ್ಲಿಡಲು ಹೆಚ್ಚು ಸಹಾಯ ಮಾಡುತ್ತದೆ. ಹೆಚ್ಚುವರಿಯಾಗಿ, ಹಣ್ಣಿನಲ್ಲಿರುವ ಉತ್ಕರ್ಷಣ ನಿರೋಧಕಗಳು ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ. ನಿಯಮಿತವಾಗಿ ಈ ಹಣ್ಣನ್ನು ಸೇವನೆ ಮಾಡುವುದರಿಂದ ಹೃದಯ ಸಂಬಂಧಿತ ಕಾಯಿಲೆಗಳ ಅಪಾಯ ಕಡಿಮೆ ಮಾಡುತ್ತದೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ.

ರೋಗನಿರೋಧಕ ಶಕ್ತಿ ವೃದ್ಧಿಸಲು: ಲಿಚಿ ಹಣ್ಣಿನಲ್ಲಿ ವಿಟಮಿನ್ ಸಿ ಸಮೃದ್ಧವಾಗಿ ಕಂಡು ಬರುತ್ತದೆ. ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ವೈರಲ್ ಸೋಂಕುಗಳು, ನೆಗಡಿಯಂತಹ ವಿವಿಧ ಸಮಸ್ಯೆಗಳು ಬರದಂತೆ ನಮ್ಮನ್ನು ರಕ್ಷಿಸುತ್ತದೆ.



ದೇಹದ ತೂಕ ನಿರ್ವಹಣೆಗೆ: ದೇಹದ ತೂಕ ಇಳಿಸಿಕೊಳ್ಳಲು ಪ್ರಯತ್ನಿಸುವವರಿಗೆ ಲಿಚಿ ಹಣ್ಣು ಒಂದು ಅತ್ಯುತ್ತಮ ಆಯ್ಕೆ. ಈ ಹಣ್ಣುಗಳಲ್ಲಿ ಕಡಿಮೆ ಕ್ಯಾಲೋರಿಗಳನ್ನು ಹೊಂದಿರುತ್ತವೆ. ಜೊತೆಗೆ ಹೆಚ್ಚಿನ ನೀರಿನ ಅಂಶವನ್ನು ಒಳಗೊಂಡಿರುತ್ತದೆ. ದೇಹಕ್ಕೆ ತ್ವರಿತ ಶಕ್ತಿ ಒದಗಿಸುವುದರ ಜೊತೆಗೆ ಹಸಿವು ನಿಯಂತ್ರಿಸುವಲ್ಲಿ ಈ ಹಣ್ಣು ತುಂಬಾ ಸಹಾಯ ಮಾಡುತ್ತವೆ ಎನ್ನುತ್ತಾರೆ ತಜ್ಞರು.

ಚರ್ಮದ ಸೌಂದರ್ಯಕ್ಕೆ: ಲಿಚಿ ಹಣ್ಣಿನಲ್ಲಿರುವ ಆಲಿಗೊನಾಲ್ ಎಂದು ಕರೆಯಲ್ಪಡುವ ವಸ್ತು ಚರ್ಮದ ಮೇಲಿನ ಸುಕ್ಕುಗಳು ಹಾಗೂ ಕಲೆಗಳನ್ನು ಕಡಿಮೆ ಮಾಡಲು ತುಂಬಾ ಸಹಾಯ ಮಾಡುತ್ತದೆ. ಇದು ಸೂರ್ಯನ ಬೆಳಕಿನಿಂದ ಹಾನಿಗೊಳಗಾದ ಚರ್ಮವನ್ನು ಸರಿಪಡಿಸುವುದರ ಜೊತೆಗೆ ಚರ್ಮಕ್ಕೆ ನೈಸರ್ಗಿಕ ಹೊಳಪನ್ನು ನೀಡುವಲ್ಲಿ ಅತ್ಯುತ್ತಮವಾಗಿ ಪಾತ್ರ ವಹಿಸುತ್ತದೆ ಎಂದು ತಜ್ಞರು ವಿವರಿಸುತ್ತಾರೆ.

ಮೂಳೆ ಆರೋಗ್ಯ: ಲಿಚಿ ಹಣ್ಣಿನಲ್ಲಿ ಮೆಗ್ನೀಸಿಯಮ್, ರಂಜಕ, ಮ್ಯಾಂಗನೀಸ್ ಹಾಗೂ ತಾಮ್ರದಂತಹ ಖನಿಜಗಳಿವೆ. ಈ ಖನಿಜಗಳು ಮೂಳೆ ಸಾಂದ್ರತೆ ಹೆಚ್ಚಿಸುತ್ತವೆ ಹಾಗೂ ಬಲವಾದ, ಆರೋಗ್ಯಕರ ಮೂಳೆಗಳನ್ನು ಕಾಪಾಡಿ ಕೊಳ್ಳಲು ಸಹಾಯ ಮಾಡುತ್ತವೆ. ಲಿಚಿ ಹಣ್ಣುಗಳನ್ನು ನಿಯಮಿತವಾಗಿ ಸೇವನೆ ಮಾಡುವುದು ಒಳ್ಳೆಯದೆಂದು ವೈದ್ಯರು ಸಲಹೆ ನೀಡುತ್ತಾರೆ.

ಜೀರ್ಣಕ್ರಿಯೆ ಸುಧಾರಿಸಲು: ಲಿಚಿ ಹಣ್ಣುಗಳಲ್ಲಿ ನಾರಿನಂಶವು ಸಮೃದ್ಧವಾಗಿ ಕಂಡುಬರುತ್ತದೆ. ಲಿಚಿ ಮಲಬದ್ಧತೆಯನ್ನು ತಡೆಯಲು ಹೆಚ್ಚು ಸಹಾಯ ಮಾಡುತ್ತದೆ. ಜೀರ್ಣಾಂಗ ವ್ಯವಸ್ಥೆಯನ್ನು ಸ್ವಚ್ಛವಾಗಿರಿಸಲು ತುಂಬಾ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಲಿಚಿ ಆಹಾರವನ್ನು ತ್ವರಿತವಾಗಿ ಜೀರ್ಣಿಸಿಕೊಳ್ಳಲು ತುಂಬಾ ಸಹಾಯ ಮಾಡುತ್ತದೆ.

ವಿಟಮಿನ್ ಸಿ, ನಾರಿನಂಶ ಮತ್ತು ಪೊಟ್ಯಾಸಿಯಮ್ ಅಧಿಕವಾಗಿರುವ ಲಿಚಿ ಹಣ್ಣನ್ನು ಮಧುಮೇಹಿಗಳು ಮಿತವಾಗಿ ಸೇವಿಸಬೇಕು. ಜೊತೆಗೆ ಮಧುಮೇಹಿಗಳು ವೈದ್ಯರ ಸಲಹೆ ಪಡೆದುಕೊಳ್ಳುವುದು ಒಳ್ಳೆಯದು. ಖಾಲಿ ಹೊಟ್ಟೆಯಲ್ಲಿ ಅತಿಯಾಗಿ ಸೇವಿಸುವುದರಿಂದ ಮಕ್ಕಳಲ್ಲಿ ರಕ್ತದೊತ್ತಡ, ಗ್ಲೂಕೋಸ್ ಮಟ್ಟವನ್ನು ಇಳಿಕೆಯಾಗುವ ಅಪಾಯವಿರುತ್ತದೆ ಎಂದು ತಜ್ಞರು ತಿಳಿಸುತ್ತಾರೆ.

ತಜ್ಞರು ತಿಳಿಸುವ ಸಲಹೆಗಳು ಹೀಗಿವೆ

ಪೋಷಕರು ನಿಮ್ಮ ಮಕ್ಕಳನ್ನು ಇತರರೊಂದಿಗೆ ಹೋಲಿಕೆ ಮಾಡುತ್ತಿದ್ದೀರಾ?

ಇಂದಿನ ಆಧುನಿಕ ಸ್ಪರ್ಧಾತ್ಮಕ ಯುಗದಲ್ಲಿ ಪೋಷಕರು ತಮ್ಮ ಮಕ್ಕಳನ್ನು ಬೆಳೆಸಲು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ನಿಮಗಾಗಿ ತಜ್ಞರು ಸೂಚಿಸಿರುವ ಮಹತ್ವದ ಟಿಪ್ಸ್ ಈ ಸ್ಟೋರಿಯಲ್ಲಿ ನೋಡೋಣ.

ಒಂದಕ್ಕಿಂತ ಹೆಚ್ಚು ಮಕ್ಕಳಿರುವ ಕುಟುಂಬಗಳಲ್ಲಿ ಹೋಲಿಕೆಗಳು ಹೆಚ್ಚಾಗಿ ಉದ್ಭವಿಸುತ್ತವೆ. ಇದರ ಪರಿಣಾಮವಾಗಿ ಮಕ್ಕಳಲ್ಲಿ ಅಸೂಯೆ ಮತ್ತು ದ್ವೇಷದ ಭಾವನೆಗಳಿಗೆ ಕಾರಣವಾಗುತ್ತದೆ. ಪೋಷಕರಿಗೆ ಈ ನಕಾರಾತ್ಮಕ ಭಾವನೆಗಳನ್ನು ಉತ್ತೇಜಿಸಬಾರದು, ಬದಲಿಗೆ ಮಕ್ಕಳು ಶಿಸ್ತು ಮತ್ತು ಬಲವಾದ ಬಂಧಗಳೊಂದಿಗೆ ಬೆಳೆಯುವ ವಾತಾವರಣವನ್ನು ಬೆಳೆಸಬೇಕೆಂದು ತಜ್ಞರು ಸಲಹೆ ನೀಡುತ್ತಾರೆ. ಈ ಪ್ರಕ್ರಿಯೆಯಲ್ಲಿ ಪೋಷಕರು ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಪೋಷಕರಿಗಾಗಿ ತಜ್ಞರು ಸೂಚಿಸಿರುವ ಮಹತ್ವದ ಸಲಹೆಗಳ ಕುರಿತು ಇಲ್ಲಿ ತಿಳಿಯೋಣ.

ಒಡಹುಟ್ಟಿದವರ ನಡುವೆ ಅಸೂಯೆ ಮತ್ತು ಸಂಘರ್ಷದ ಪ್ರಾಥಮಿಕ ಕಾರಣವನ್ನು ಒಂದು ಮಗುವನ್ನು ಇನ್ನೊಂದು ಮಗುವಿನ ಮೇಲೆ ಒಲವು ತೋರುವ ಕ್ರಿಯೆ ಅಥವಾ ಒಬ್ಬರು ಶ್ರೇಷ್ಠರು ಹಾಗೂ ಇನ್ನೊಬ್ಬರು ಕೀಳಾಗಿದ್ದಾರೆ ಎಂಬ ಗ್ರಹಿಕೆಯನ್ನು ಸೃಷ್ಟಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಹೋಲಿಕೆಗಳನ್ನು ಮಾಡುವುದು (ಉದಾ: ಹಿರಿಯ ಮಗು ಸುಂದರವಾಗಿದೆ, ಕಿರಿಯ ಮಗು ಉತ್ತಮ ವಿದ್ಯಾರ್ಥಿ, ಅಥವಾ ಇನ್ನೊಬ್ಬರು ಸ್ಪಷ್ಟವಾಗಿ ಹೇಳುತ್ತಿದ್ದಾರೆ ಎಂದು ಗಮನಿಸುವುದು), ಅತಿಯಾದ ಪಕ್ಷಪಾತವನ್ನು ತೋರಿಸುವುದು ಅಥವಾ ಮಗು ತಪ್ಪು ಮಾಡಿದಾಗಲೂ ಪರಿಣಾಮಗಳಿಂದ ರಕ್ಷಿಸುವುದು ವಿವಿಧ ಕ್ರಿಯೆಗಳು ಯುವ ಮನಸ್ಸುಗಳ ಮೇಲೆ ಆಳವಾದ ಗಾಯಗಳನ್ನು ಉಂಟುಮಾಡಬಹುದು. ಈ ನಡವಳಿಕೆಗಳು ಅನಿವಾರ್ಯವಾಗಿ ಅಸೂಯೆ ಮತ್ತು ದ್ವೇಷಕ್ಕೆ ದಾರಿ ಮಾಡಿಕೊಡುತ್ತವೆ ಎಂದು ತಜ್ಞರು ಎಚ್ಚರಿಕೆ ನೀಡುತ್ತಾರೆ.

ಹಂಚಿಕೊಳ್ಳುವುದನ್ನು ಪ್ರೋತ್ಸಾಹಿಸಬೇಕು: ತಜ್ಞರು ಮಕ್ಕಳಲ್ಲಿ ಆಹಾರ, ಆಟಿಕೆಗಳು ಮತ್ತು ಇತರೆ ವಸ್ತುಗಳನ್ನು ಚಿಕ್ಕ ವಯಸ್ಸಿನಿಂದಲೇ ಹಂಚಿಕೊಳ್ಳುವ ಅಭ್ಯಾಸವನ್ನು ಬೆಳೆಸಬೇಕಾಗುತ್ತದೆ. ಇದು ನನ್ನದು ಅಥವಾ ಅದು ನನ್ನದು ಎಂದು ಮಕ್ಕಳು ಆಸ್ತಿಯ ಬಗ್ಗೆ ಜಗಳವಾಡಿದಾಗ ತಮಾಷೆ ಮಾಡುವ ಬದಲು, ಪರಸ್ಪರ ಕಸಿದುಕೊಳ್ಳದೆ ಹಂಚಿಕೊಳ್ಳುವುದು ಹೇಗೆ ಎಂದು ಪೋಷಕರು ಅವರಿಗೆ ಕಲಿಸಬೇಕಾಗುತ್ತದೆ. ಇದು ಅವರೊಂದಿಗೆ ನಿಧಾನವಾಗಿ ತರ್ಕಿಸುವುದನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ನಿಮ್ಮ ಸಹೋದರಿ ಅಥವಾ ಸಹೋದರ ಸ್ವಲ್ಪ ಸಮಯದವರೆಗೆ ಅದರೊಂದಿಗೆ ಆಟವಾಡಬಹುದು, ಮತ್ತು ನಂತರ ನೀವು ನಿಮ್ಮ ಸರದಿಯನ್ನು ಪಡೆಯಬಹುದು ಎಂದು ವಿವರಿಸುವ ಮೂಲಕ ಮಕ್ಕಳಿಗೆ ಅರ್ಥ ಮಾಡಿಸಬೇಕಾಗುತ್ತದೆ.

ಮಕ್ಕಳಿಗೆ ಸಭ್ಯತೆ ಕಲಿಸುವುದು: ಮಕ್ಕಳಿಗೆ ಮನೆಯಲ್ಲಿರುವ ವಯಸ್ಕರೊಂದಿಗೆ ಮಾತ್ರವಲ್ಲದೆ ಅವರ ಒಡಹುಟ್ಟಿದವರು ಹಾಗೂ ಇತರೆ ಮಕ್ಕಳೊಂದಿಗೆ ಗೌರವದಿಂದ ವರ್ತಿಸಲು ಕಲಿಸಬೇಕು. ಯಾರಾದರೂ ಸಹಾಯ ಮಾಡಿದಾಗ ಧನ್ಯವಾದಗಳು ಹಾಗೂ ಅವರು ತಪ್ಪು ಮಾಡಿದಾಗ ಕ್ಷಮಿಸಿ ಎಂದು ಹೇಳಲು ಮಕ್ಕಳಿಗೆ ಕಲಿಸುವುದು ಅತ್ಯಗತ್ಯ. ತಮ್ಮ ಹಿರಿಯ ಸಹೋದರರಿಗೆ ಗೌರವವನ್ನು ತೋರಿಸುವುದರ ಜೊತೆಗೆ ಕಿರಿಯ ಮಕ್ಕಳನ್ನು ಪ್ರೀತಿಯಿಂದ ಸಂಬೋಧಿಸಲು ಪ್ರೋತ್ಸಾಹಿಸಬೇಕು. ಅವರ ಮಾತು ಕಠೋರತೆಯಿಂದ ಮುಕ್ತವಾಗಿರಲು ಕಾಳಜಿ ವಹಿಸಬೇಕು. ಇದಲ್ಲದೆ, ತಜ್ಞರು ಮಕ್ಕಳು ಮುಖ್ಯವಾಗಿ ತಮ್ಮ ಹೆತ್ತವರನ್ನು ಗಮನಿಸುವುದರ ಮೂಲಕ ಕಲಿಯುತ್ತಾರೆ ಎಂದು ತಜ್ಞರು ತಿಳಿಸುತ್ತಾರೆ.

ಪೋಷಕರು ನೀವು ಮನೆಯೊಳಗೆ ಹಿರಿಯರು, ನಿಮ್ಮ ಸ್ವಂತ ಒಡಹುಟ್ಟಿದವರೊಂದಿಗೆ ಹೇಗೆ ಸಂವಹನ ನಡೆಸುತ್ತೀರಿ ಎಂಬುದನ್ನು ಮಕ್ಕಳು ಅನುಕರಿಸುತ್ತಾರೆ. ಆದ್ದರಿಂದ, ಪೋಷಕರು ಮಾದರಿಯಾಗಿ ಕಾರ್ಯನಿರ್ವಹಿಸಬೇಕು ಎಂದು ತಜ್ಞರು ಒತ್ತಿ ಹೇಳುತ್ತಾರೆ. ಈ ರೀತಿಯಲ್ಲಿ ಮಕ್ಕಳಲ್ಲಿ ಪ್ರೀತಿ ಮತ್ತು ಸಹಕಾರವನ್ನು ಬೆಳೆಸಿದರೆ, ಮನೆಯು ಸಂತೋಷದ ಸ್ಥಳವಾಗಿ ಉಳಿಯುತ್ತದೆ.

ಸಾಮರಸ್ಯ ಕಾಪಾಡುವುದು ಹೇಗೆ? ಮಕ್ಕಳ ನಡುವಿನ ಘರ್ಷಣೆಗಳು ತುಂಬಾ ಸಾಮಾನ್ಯವಾಗಿದೆ. ಈ ಘರ್ಷಣೆಗಳು ಹೇಗೆ ಪರಿಹರಿಸಲ್ಪಡುತ್ತವೆ ಎಂಬುದು ನಿಜವಾಗಿಯೂ ಮುಖ್ಯವಾಗುತ್ತದೆ. ವಾದ ಉಂಟಾದಾಗ ಒಂದು ಮಗುವನ್ನು ತಕ್ಷಣವೇ ಬೈಯಬಾರದು. ಬದಲಾಗಿ ಪೋಷಕರು ಕಥೆಯ ಎರಡೂ ಬದಿಗಳನ್ನು ಕೇಳಬೇಕು. ತರುವಾಯ, ಪರಸ್ಪರ ಕ್ಷಮೆಯಾಚಿಸಲು ಅವರನ್ನು ಪ್ರೋತ್ಸಾಹಿಸಬೇಕಾಗುತ್ತದೆ. ನೀವು ಅವರನ್ನು ಒಟ್ಟಿಗೆ ಆಟವಾಡಲು ಪುನರಾರಂಭಿಸಬೇಕು ಎಂದು ತಜ್ಞರು ಒತ್ತಿ ಹೇಳುತ್ತಾರೆ.

ಹೆಚ್ಚುವರಿಯಾಗಿ ದೈಹಿಕ ಹಿಂಸೆಯನ್ನು ಆಶ್ರಯಿಸದಂತೆ ನೀವು ಅವರಿಗೆ ದೃಢವಾಗಿ ಸೂಚಿಸಬೇಕು. ಅವರು ವಿರೋಧಿಗಳಲ್ಲ ಎಂದು ಅವರಿಗೆ ಅರ್ಥಮಾಡಿಕೊಳ್ಳಲು ಸಹಾಯ ಮಾಡಿ. ಮಕ್ಕಳಿಗೆ ಒಟ್ಟಿಗೆ ಪೂರ್ಣಗೊಳಿಸಲು ಒಂದು ಸಣ್ಣ ಕೆಲಸವನ್ನು ನಿಯೋಜಿಸಿ ಹಾಗೂ ಅದರಲ್ಲಿ ಸಹಕರಿಸಲು ಅವರನ್ನು ಪ್ರೋತ್ಸಾಹಿಸಿಬೇಕಾಗುತ್ತದೆ. ಇದರ ಪರಿಣಾಮವಾಗಿ ಮಕ್ಕಳಲ್ಲಿ ಸಹಕಾರದ ಮನೋಭಾವವು ಅರಳುತ್ತದೆ.

ಇದಲ್ಲದೆ ಒಂದೇ ಸೂರಿನಡಿ ವಾಸಿಸುತ್ತಾ ರಕ್ತಸಂಬಂಧಗಳನ್ನು ಹಂಚಿಕೊಂಡರೂ ಪ್ರತಿ ಮಗುವಿಗೆ ಒಂದು ನಿರ್ದಿಷ್ಟ ಮಟ್ಟದ ವೈಯಕ್ತಿಕ ಸ್ಥಳ ಮತ್ತು ಸ್ವಾತಂತ್ರ್ಯವನ್ನು ನೀಡುವುದು ಬಹಳ ಮುಖ್ಯ. ಅವರು ಪರಸ್ಪರರ ಗೌಪ್ಯತೆ ಗೌರವಿಸುತ್ತಾರೆ ಎಂದು ನೀವು ಖಚಿತಪಡಿಸಿಕೊಳ್ಳಬೇಕು. ಉದಾಹರಣೆಗೆ, ಪರಸ್ಪರರ ಡೈರಿಗಳನ್ನು ಓದುವುದನ್ನು ತಡೆಯುವ ಮೂಲಕ, ಅವರು ತಮ್ಮ ವೈಯಕ್ತಿಕ ಇಷ್ಟ ಮತ್ತು ಕಷ್ಟಗಳನ್ನು ವ್ಯಕ್ತ ಪಡಿಸಲು ಮುಕ್ತರಾಗಿರುತ್ತಾರೆ ಎಂದು ತಜ್ಞರು ಸಲಹೆ ನೀಡುತ್ತಾರೆ.



» **ಬೆಳಕಿನ ಪರದೆಯ ಹಿಂದೆ ಚರ್ಮದ ಗೊಂಬೆಗಳನ್ನು ಆಡಿಸುತ್ತಾ, ರಾಮಾಯಣ, ಮಹಾಭಾರತಗಳ ಮಹಾಕಾವ್ಯಗಳನ್ನು ಹಳ್ಳಿ-ಹಳ್ಳಿಗಳಲ್ಲಿ ಪ್ರದರ್ಶಿಸುತ್ತಾ, ಸಂಸ್ಕೃತಿಯ ದೀವಟಿಗೆಯನ್ನು ತಲೆಮಾರುಗಳಿಂದ ದಾಟಿಸುತ್ತಾ ಬಂದ ತಾಯಿ ಇವರು. ಇವರ ಈ ನಿಸ್ವಾರ್ಥ ಕಲಾ ಸೇವೆಗೆ ಭಾರತ ಸರಕಾರ ಪದ್ಮಶ್ರೀ ಪ್ರಶಸ್ತಿ ಘೋಷಿಸಿದಾಗ, ಇಡೀ ಜನಪದ ಲೋಕವೇ ಸಂಭ್ರಮಿಸಿತು.**

ತೊಗಲುಗೊಂಬೆಯಾಟಕ್ಕೆ ಜೀವ ತುಂಬಿದ ತಾಯಿ ಭೀಮವ್ವಗೆ ಪ್ರಶಸ್ತಿ

ಒಂದೊಳ್ಳೆ ಮಾತು

ರಾಷ್ಟ್ರಪತಿ ಭವನದ ಭವ್ಯವಾದ ದರ್ಬಾರ್ ಹಾಲ್ ಎಷ್ಟೋ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಆದರೆ, ಇತ್ತೀಚೆಗೆ ನಡೆದ ಪದ್ಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅನಾವರಣ ಗೊಂಡ ಆ ದೃಶ್ಯ ಇಡೀ ದೇಶದ ಕಣ್ಣಾಲಿಗಳನ್ನು ತೇವಗೊಳಿಸಿತು; ಭಾರತೀಯ ಸಂಸ್ಕೃತಿಯ ಮತ್ತು ಮಾನವೀಯ ಮೌಲ್ಯಗಳ ಪರಮೋಚ್ಚ ಶಿಖರವನ್ನು ಜಗತ್ತಿಗೆ ಸಾರಿತು. ಅದು ಕೇವಲ ಅಧಿಕೃತ ಪ್ರಶಸ್ತಿ ವಿತರಣೆಯಾಗಿರಲಿಲ್ಲ, ಬದಲಿಗೆ ಅಪ್ಪಟ ಗ್ರಾಮೀಣ ಭಾರತದ ಜನಪದ ಶಕ್ತಿಗೆ ದೆಹಲಿಯ ರಾಜದಂಡವೇ ತಲೆಬಾಗಿ ನಮಸ್ಕರಿಸಿದ ಪರಮ ಪವಿತ್ರ ಕ್ಷಣವಾಗಿತ್ತು. ಆ ಅಪೂರ್ವ ಗೌರವಕ್ಕೆ ಪಾತ್ರರಾದವರು ನಮ್ಮ ಹೆಮ್ಮೆಯ ಕರ್ನಾಟಕದ ಕೊಪ್ಪಳ ಜಿಲ್ಲೆಯ ಮೊರನಾಳ ಗ್ರಾಮದ 96 ವರ್ಷದ ಹಣ್ಣುಜೀವ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತರ. ಅಕ್ಷರ ಜ್ಞಾನವಿಲ್ಲದ, ಬಡತನದ ಬೇಗೆಯಲ್ಲಿ ಬೆಂದ, ಯಾವುದೇ ಆಧುನಿಕ ಸೌಲಭ್ಯಗಳಿಲ್ಲದ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದ ಭೀಮವ್ವನವರ ಸಾಧನೆ ಸಾಮಾನ್ಯವಾದುದಲ್ಲ. ಕರ್ನಾಟಕದ ಸಾಂಪ್ರದಾಯಿಕ ಕಲೆಯಾದ ತೊಗಲು ಗೊಂಬೆಯಾಟವನ್ನು ತಮ್ಮ ಉಸಿರಾಗಿಸಿಕೊಂಡು, ಕಳೆದ ಏಳು ದಶಕಗಳಿಗೂ ಹೆಚ್ಚು ಕಾಲ ಅವರು ಈ ನಶಿಸಿ ಹೋಗುತ್ತಿರುವ ಜನಪದ ಕಲೆಯನ್ನು ಜೀವಂತವಾಗಿಟ್ಟಿದ್ದಾರೆ.

ಬೆಳಕಿನ ಪರದೆಯ ಹಿಂದೆ ಚರ್ಮದ ಗೊಂಬೆಗಳನ್ನು ಆಡಿಸುತ್ತಾ, ರಾಮಾಯಣ, ಮಹಾಭಾರತಗಳ ಮಹಾಕಾವ್ಯಗಳನ್ನು ಹಳ್ಳಿ-ಹಳ್ಳಿಗಳಲ್ಲಿ ಪ್ರದರ್ಶಿಸುತ್ತಾ, ಸಂಸ್ಕೃತಿಯ ದೀವಟಿಗೆಯನ್ನು ತಲೆಮಾರುಗಳಿಂದ ದಾಟಿಸುತ್ತಾ ಬಂದ ತಾಯಿ ಇವರು. ಇವರ ಈ ನಿಸ್ವಾರ್ಥ ಕಲಾ ಸೇವೆಗೆ ಭಾರತ ಸರಕಾರ ಪದ್ಮಶ್ರೀ ಪ್ರಶಸ್ತಿ ಘೋಷಿಸಿದಾಗ, ಇಡೀ ಜನಪದ ಲೋಕವೇ ಸಂಭ್ರಮಿಸಿತು.

ದರ್ಬಾರ್ ಹಾಲ್‌ನಲ್ಲಿ ಪ್ರಶಸ್ತಿ ಪ್ರದಾನದ ಕಟ್ಟುನಿಟ್ಟಿನ ನಿಯಮಗಳಿರುತ್ತವೆ. ಪ್ರಶಸ್ತಿ ಪುರಸ್ಕೃತರು ವೇದಿಕೆಯ ಮೆಟ್ಟಿಲುಗಳನ್ನು ಹತ್ತಿ ನಡೆದು ಬಂದು, ಗೌರವಾನ್ವಿತ ರಾಷ್ಟ್ರಪತಿಗಳು ನಿಂತಿರುವ ಜಾಗದಲ್ಲಿ ಪ್ರಶಸ್ತಿ ಸ್ವೀಕರಿಸಬೇಕು. ಆದರೆ, 96 ವರ್ಷದ ಭೀಮವ್ವನವರು ತಮ್ಮ ಜಾಗದಿಂದ ಎದ್ದು ನಿಂತು ಮೆಟ್ಟಿಲುಗಳತ್ತ ಹೆಜ್ಜೆ ಇಡಲು ಶ್ರಮಪಡುತ್ತಿದ್ದ ಆ ಕ್ಷಣ ಇಡೀ ಸಭಾಂಗಣದ ಉಸಿರು ಬಿಗಿ ಹಿಡಿಯುವಂತೆ ಮಾಡಿತು.

ಆಗ ಅಲ್ಲಿ ನಡೆದದ್ದು ಇತಿಹಾಸ! ಭೀಮವ್ವನವರ ವಯಸ್ಸು ಮತ್ತು ದೈಹಿಕ ಸ್ಥಿತಿಯನ್ನು ತಕ್ಷಣವೇ ಗ್ರಹಿಸಿದ ಭಾರತದ ಪ್ರಥಮ ಪ್ರಜೆ, ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಯಾವುದೇ ಶಿಷ್ಟಾಚಾರದ ಹಂಗಿಗೆ ಬೀಳಲಿಲ್ಲ, ಅವರು ತಾವೇ ಸ್ವತಃ ವೇದಿಕೆಯ ಮೆಟ್ಟಿಲುಗಳನ್ನು ಇಳಿದು ಕೆಳಗೆ ಬಂದರು.

ನಡೆದಾಡುವ ಜೀವಂತ ಇತಿಹಾಸದಂತಿದ್ದ ಆ ಅಜ್ಜಿಯ ಬಳಿಗೇ ಬಂದು, ಅತ್ಯಂತ ಮಮತೆ ಮತ್ತು ಗೌರವದಿಂದ ಪದ್ಮಶ್ರೀ ಪದಕ ಹಾಗೂ ಪ್ರಶಸ್ತಿ ಪತ್ರವನ್ನು ಅವರ ಕೈಗಿಟ್ಟರು. ಅಧಿಕಾರದ ಪರಮೋಚ್ಚ ಪೀಠದಲ್ಲಿದ್ದ ಮಹಿಳೆಯೊಬ್ಬರು, ಹಳ್ಳಿಯ ಕಲಾಮಾತೆಯ ಪಾದದ ಬಳಿ ಬಂದು ನಿಂತ ಆ ದೃಶ್ಯ ಕೇವಲ ಭಾವುಕತೆಯಲ್ಲ, ಅದು ಅಧಿಕಾರವು ಸಂಸ್ಕೃತಿಗೆ ತೋರಿದ ಗೌರವವಾಗಿತ್ತು.

ಗೌರವದ ಈ ಮಹಾಪೂರ ಅಷ್ಟಕ್ಕೇ ನಿಲ್ಲಲಿಲ್ಲ, ಪ್ರಶಸ್ತಿ ಸ್ವೀಕರಿಸಿ ಭೀಮವ್ವನವರು ಮುನ್ನಡೆಯುತ್ತಿದ್ದಾಗ, ಮುಂಚೂಣಿಯಲ್ಲಿದ್ದ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ತಮ್ಮ ಆಸನದಿಂದ ಎದ್ದು ಬಂದು, ಆ ಹಣ್ಣು ಜೀವದ ಮುಂದೆ ತಲೆ ಬಾಗಿ, ಅವರ ಪಾದಗಳನ್ನು ಮುಟ್ಟಿ ಸಾಷ್ಟಾಂಗ ನಮಸ್ಕಾರ ಮಾಡಿದರು.

ಕರ್ನಾಟಕದ ಗೊಂಬೆಯಾಟದ ಅಜ್ಜಿ ಪ್ರೀತಿಯಿಂದ ಪ್ರಧಾನಿಯವರ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ದೆಹಲಿಯ ದೊರೆಗಳೆಲ್ಲರೂ ಹಳ್ಳಿಯ ಅವಿದ್ಯಾವಂತ, ಆದರೆ ಕಲಾ ಶ್ರೇಷ್ಠತೆಯ ಶರಧಿಯಾಗಿದ್ದ ತಾಯಿಯ ಮುಂದೆ ಮಣಿದ ಆ ಕ್ಷಣ, ಭಾರತೀಯ ಸಂಸ್ಕಾರ ಎಂದರೆ ಏನು ಎಂಬುದನ್ನು ಜಗತ್ತಿಗೆ ಮತ್ತೊಮ್ಮೆ ಮನವರಿಕೆ ಮಾಡಿಕೊಟ್ಟಿತು.

ತೊಗಲು ಗೊಂಬೆಯಾಟವು ಕೇವಲ ಚರ್ಮದ ಗೊಂಬೆಗಳ ಪ್ರದರ್ಶನವಲ್ಲ; ಅದು ಕರಕುಶಲತೆ, ಸಂಗೀತ, ಸಾಹಿತ್ಯ ಮತ್ತು ಮೌಲ್ಯಗಳ ಸಮ್ಮಿಲನ. ಅದನ್ನು ತಮ್ಮ ಗ್ರಾಮವಾದ ಮೊರನಾಳದಲ್ಲಿ ಇಂದಿಗೂ ಯುವ ಪೀಳಿಗೆಗೆ ಧಾರೆ ಎರೆಯುತ್ತಿರುವ ಭೀಮವ್ವನವರ ಶ್ರಮಕ್ಕೆ ಈ ಪ್ರಶಸ್ತಿ ಮತ್ತು ಸಿಕ್ಕ ಗೌರವ ಅತ್ಯಂತ ಸೂಕ್ತವಾದುದು.

ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ತಮ್ಮ ನೆಚ್ಚಿನ ಕಲೆಗೆ ಜೀವ ತುಂಬುತ್ತಾ ಅದನ್ನು ಮುಂದಿನ ಪೀಳಿಗೆಗೂ ದಾಟಿಸುತ್ತಿರುವ ಸಾವಿರಾರು ಇಂತಹ ಕಲಾಯೋಗಿಗಳು ಭಾರತದುದ್ದಕ್ಕೂ ಸಿಗುತ್ತಾರೆ. ಇಂತಹ ಅಪರೂಪದ ಎಲೆಮರೆಕಾಯಿಗಳನ್ನ ಹುಡುಕಿ ಅವರಿಗೆ ಗೌರವ ಸಲ್ಲಿಸುತ್ತಿರುವ ಭಾರತ ಸರಕಾರಕ್ಕೊಂದು ದೊಡ್ಡ ನಮಸ್ಕಾರ.

- ರೂಪಾ ಗುರುರಾಜ್

ಅಂಬೇಡ್ಕರ್ ಕೇವಲ ಒಂದು ಸಮುದಾಯಕ್ಕೆ ಸೀಮಿತ

ಅತ್ಯಂತ ನೋವಿನ ಸಂಗತಿ: 135ನೇ ಅಂಬೇಡ್ಕರ್ ಹಬ್ಬ ಕಾರ್ಯಕ್ರಮದಲ್ಲಿ ಮೊಮ್ಮಗ ಆನಂದ್ ರಾಜ್ ಯಶವಂತ್ ಅಂಬೇಡ್ಕರ್ ಬೇಸರ

• ಪ್ರಜೋದಯ ವರದಿ

ಅರಕಲಗೂಡು: ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತ ದೇಶದ ಸಮಗ್ರ ಅಭಿವೃದ್ಧಿ ಹಾಗೂ ಸರ್ವರಿಗೂ ಸಮಬಾಳು, ಸಮಪಾಲು ತತ್ವದಡಿ ಸಂವಿಧಾನ ರಚಿಸಿಕೊಟ್ಟಿದ್ದು, ಇಂತಹ ಮಹಾನ್ ನಾಯಕನನ್ನು ಕೇವಲ ಒಂದು ಸಮುದಾಯಕ್ಕೆ ಸೀಮಿತಗೊಳಿಸುತ್ತಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ ಎಂದು ಅಂಬೇಡ್ಕರ್ ಮೊಮ್ಮಗ ಆನಂದ್ ರಾಜ್ ಯಶವಂತ್ ಅಂಬೇಡ್ಕರ್ ಅವರು ಬೇಸರ ವ್ಯಕ್ತಪಡಿಸಿದರು.

ಶನಿವಾರ ಪಟ್ಟಣದ ಕ್ರೀಡಾಂಗಣದಲ್ಲಿ ದಲಿತ ಸಂಘಟನೆಗಳ ಒಕ್ಕೂಟ ಹಮ್ಮಿಕೊಂಡಿದ್ದ 135ನೇ ಅಂಬೇಡ್ಕರ್ ಹಬ್ಬ-2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಡೀ ವಿಶ್ವವೇ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಗೌರವಿಸುವ ಕೆಲಸಗಳನ್ನು ಮಾಡುತ್ತಿದೆ. ಆದರೆ, ನಮ್ಮ ದೇಶದಲ್ಲಿ ಇನ್ನೂ ಕೂಡ ಅವರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸಲಾಗುತ್ತಿದೆ. ಭಾರತ ದೇಶದ ಅಭಿವೃದ್ಧಿ ಮತ್ತು ಹೊಸ ಹೊಸ ಯೋಜನೆಗಳ ಅನುಷ್ಠಾನಕ್ಕೆ ತರಲಾಗುತ್ತಿದೆ. ಇದು ಕೂಡ ಅಂಬೇಡ್ಕರ್ ಅವರ ಸಂವಿಧಾನದ ಕೊಡುಗೆ ಇದೆ.ದೇಶದ ಎಲ್ಲಾ ಜನರು ಬಾಬಾ ಸಾಹೇಬರ ಸಂವಿಧಾನದ ಕೊಡುಗೆ ಮತ್ತು ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಸಂವಿಧಾನದ ಆಶಯಗಳನ್ನು ಈಡೇರಿಸೋಣ ಎಂದು ಮನವಿ ಮಾಡಿದರು.

ಭಾರತೀಯ ಎಲ್ಲಾ ನಾಗರೀಕರ ಹಕ್ಕು ಬಾಧ್ಯತೆಗಳನ್ನು ಎತ್ತಿಹಿಡಿಯುವ ಕೆಲಸ, ಅವಶ್ಯಕತೆ ಸಮ ಸಮಾಜದ ಜೀವನ ಕಟ್ಟಿಕೊಳ್ಳಲು ಸಂವಿಧಾನ ಮಹಾನ್ ಗ್ರಂಥವಾಗಿದೆ. ಇದನ್ನು ರಕ್ಷಣೆ ಮಾಡುವ, ಸಹಕಾರಗೊಳಿಸುವ ನಿಟ್ಟಿನಲ್ಲಿ ಎಲ್ಲರೂ ಒಟ್ಟಾಗಿ ಶ್ರಮಿಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡೋಣ ಎಂದು ಹೇಳಿದರು.

ಅಂಬೇಡ್ಕರ್ ಅವರೊಬ್ಬ ದೇಶಪ್ರೇಮಿ, ರಾಷ್ಟ್ರವಾದಿ ಕೂಡ. ಇದು ಸಂವಿಧಾನದ ಆಶಯ ಒಳಗೊಂಡಿದೆ. ದೇಶದಲ್ಲಿ 7 ಸಾವಿರಕ್ಕಿಂತ ಹೆಚ್ಚು ಜಾತಿಗಳು, 25 ಸಾವಿರಕ್ಕೂ ಅಧಿಕ ಉಪ ಜಾತಿಗಳು, ಧರ್ಮಗಳು ಇವೆ. ಇಂತಹ ಅಂಶಗಳನ್ನು ಅವಲೋಕಿಸಿ ಪ್ರತಿಯೊಬ್ಬರಿಗೂ ಸಮಾನ ಸ್ವಾತ್ರಂತ್ಯ, ಮೂಲಭೂತ ಹಕ್ಕುಗಳು, ಮತದಾನ ವ್ಯಕ್ತಿಗತವಾಗಿ ಅನುಸರಿಸುವ ಅವಕಾಶವನ್ನು ಸಂವಿಧಾನ ಮೂಲಕ ಕಲ್ಪಿಸಿದ್ದಾರೆ. ಸಂವಿಧಾನವನ್ನು ಅಧ್ಯಯನ ಮಾಡಿದರೆ ಅಂಬೇಡ್ಕರ್ ಅವರ ಆಶಯ ತಿಳಿಯುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ಆರ್ಶೀವಚನ ನೀಡಿದ ಬೀದರ್‌ನ ಆಯುಷ್ಮಾನ್ ವರಜೋತಿ ಬಂತೇಜಿ ಅವರು, ಈ ದೇಶದಲ್ಲಿ ಇನ್ನೂ ಕೂಡ ಅಂಬೇಡ್ಕರ್ ಅವರನ್ನು ಸರ್ವರು ಅರ್ಥ ಮಾಡಿಕೊಳ್ಳದಿರುವುದು ನೋವಿನ ಸಂಗತಿ. ಅಂಬೇಡ್ಕರ್ ಎಂದರೆ ಐಕ್ಯತೆ, ಭಾವೈಕ್ಯತೆ, ಸಮತೆ, ಮಮತೆಯಾಗಿದೆ. ಅಂಬೇಡ್ಕರ್ ಅವರು ಹಾಸನಕ್ಕೆ ಬಂದಿದ್ದರು. ಅವರ ಮೊಮ್ಮಗ ಅರಕಲಗೂಡಿಗೆ ತಾತನ 135ನೇ ಹುಟ್ಟು ಹಬ್ಬದ ಸಂಭ್ರಮಣೆಗೆ ಬಂದಿದ್ದಾರೆ. ಇದು ಅತ್ಯಂತ ಹಬ್ಬದ ಸಡರವಾಗಿದೆ ಎಂದು ಬಣ್ಣಿಸಬೇಕಾಗುತ್ತದೆ. ಕೇವಲ ಸಂಭ್ರಮಿಸುವ ಜತೆಗೆ ನಿತ್ಯವೂ ನಮ್ಮ ಜ್ಞಾನದ ಹಸಿವಿನ ಹಬ್ಬವಾಗಿ ಅಂಬೇಡ್ಕರ್ ಅವರನ್ನು ನೆನಪಿಸಿಕೊಂಡು ಅನುಸರಿಸಬೇಕಾಗುತ್ತದೆ ಎಂದರು.

ಹೈಕೋರ್ಟ್‌ನ ಹಿರಿಯ ವಕೀಲ ಮೋಹನ್ ಕುಮಾರ್ ಮಾತನಾಡಿ, ಸಂವಿಧಾನ ಜಾರಿಗೆ ಬಂದು 77 ವರ್ಷಗಳಾಗಿವೆ. ವಿವಿಧ ರಾಜಕೀಯ ಪಕ್ಷಗಳು 80 ವರ್ಷಗಳ ಕಾಲ ಆಡಳಿತ ನಡೆಸಿವೆ. ಆದರೆ ಯಾವೊಬ್ಬ ನಾಯಕನೂ ಕೂಡ ಅಂಬೇಡ್ಕರ್ ಅವರನ್ನು ಇಂದಿನ ಸಮಾಜಕ್ಕೆ ನೈಜತೆಯಿಂದ ಪರಿಚಯಿಸುವ ಕೆಲಸ ಮಾಡಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಾಧ್ಯಕ್ಷ ಬಿ.ಸಿ.ರಾಜೇಶ್, ಮುಖಂಡ ಸಂದೇಶ್ ಮಾತನಾಡಿದರು.

ತಹಸೀಲ್ದಾರ್ ಸೌಮ್ಯ, ಇಒ ಶ್ರೀನಿವಾಸ್, ಸಿಪಿಐ ಸುಬ್ಬಯ್ಯ, ರಾಜೇಂದ್ರ, ಕೃಷ್ಣ ಕುಮಾರ್, ಸೋಮಶೇಖರ್, ಜವರಯ್ಯ, ಗಣೇಶ್ ವೇಲಾಪುರಿ, ಅಭಿಮಾನಿಗಳು ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ2ರ ಫಲಿತಾಂಶ ಪ್ರಕಟ

• ಪ್ರಜೋದಯ ವರದಿ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ರ ಫಲಿತಾಂಶ ಪ್ರಕಟವಾಗಿದ್ದು, ಪರೀಕ್ಷೆ ಬರೆದಿದ್ದ 49,351 ವಿದ್ಯಾರ್ಥಿಗಳ ಪೈಕಿ 31,080 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.62 ಫಲಿತಾಂಶ ದಾಖಲಾಗಿದೆ.

ಮೇ 18ರಿಂದ 25ರ ವರೆಗೆ 358 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ-2ನ್ನು ನಡೆಸಲಾಗಿತ್ತು. ವಿಶೇಷ ಅಂದರೆ ಪರೀಕ್ಷೆ-2ರಲ್ಲಿ ಬರೋಬ್ಬರಿ 8,385 ಶಾಲಾ ವಿದ್ಯಾರ್ಥಿಗಳು ತಮ್ಮ ಫಲಿತಾಂಶವನ್ನು ಯಶಸ್ವಿಯಾಗಿ ಉತ್ತಮಪಡಿಸಿಕೊಂಡಿದ್ದಾರೆ.

2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಫಲಿತಾಂಶ ಏಪ್ರಿಲ್ 23 ರಂದು ಪ್ರಕಟವಾಗಿದ್ದು, ಶೇ 94.1 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 7,70,209 ವಿದ್ಯಾರ್ಥಿಗಳ ಪೈಕಿ 7,24,794 ಮಕ್ಕಳು ಪಾಸ್ ಆಗಿದ್ದರು. ಶೇ 96.18ರಷ್ಟು ಬಾಲಕಿಯರು, ಶೇ 91.94ರಷ್ಟು ಬಾಲಕರು ಉತ್ತೀರ್ಣರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡಾ 98.40ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಫಲಿತಾಂಶದಲ್ಲಿ ಮೊದಲ ಸ್ಥಾನ ಪಡೆದಿತ್ತು. ಉಡುಪಿ ಜಿಲ್ಲೆ ಶೇ 98.18ರ ಫಲಿತಾಂಶದೊಂದಿಗೆ 2ನೇ ಸ್ಥಾನ, ಉತ್ತರ ಕನ್ನಡ 3ನೇ ಸ್ಥಾನ (ಶೇ 98.09) ಮತ್ತು ಹಾಸನ 4ನೇ ಸ್ಥಾನ (ಶೇ 97.51) ಗಳಿಸಿದ್ದವು.

ಈ ಬಾರಿ ಇಲ್ಲ ಮೂರನೇ ಪರೀಕ್ಷೆ

ಈ ಬಾರಿ ಎಸ್‌ಎಸ್‌ಎಲ್‌ಸಿ ಮೂರನೇ ಪರೀಕ್ಷೆ ಇರುವುದಿಲ್ಲ. ಈ ಬಗ್ಗೆ ಏಪ್ರಿಲ್ 23ರಂದು ನಡೆದ ಸುದ್ದಿಗೋಷ್ಠಿಯಲ್ಲಿಯೇ ಅಂದಿನ ಶಿಕ್ಷಣ ಸಚಿವ ಮಧು ಬಂಗಾರಪ್ಪ ಈ ಬಗ್ಗೆ ಮಾಹಿತಿ ನೀಡಿದ್ದರು. ಪರೀಕ್ಷೆ ಒಂದರಲ್ಲಿ ಉತ್ತಮ ಫಲಿತಾಂಶ ಬಂದಿರುವುದರಿಂದ 3ನೇ ಪರೀಕ್ಷೆ ಇರುವುದಿಲ್ಲ ಎಂದು ತಿಳಿಸಿದ್ದರು.

ವಿದ್ಯುತ್ ವ್ಯತ್ಯಯ

ಹಾಸನ: ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿರುವ ದ್ವಿ-ವಿದ್ಯುತ್ ಮಾರ್ಗಗಳ ಗೋಪುರಗಳ ಮೇಲೆ ಹಾಲಿ ಇರುವ 66 ಕೆ.ವಿ ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಗೋಪುರ ಕಾಮಗಾರಿ ಹಾಗೂ ವಾಹಕ ಎಳೆಯುವ ಕಾಮಗಾರಿಗೆ ಸಂಬಂಧಿಸಿದಂತೆ 66 ಕೆ.ವಿ. ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಲೈಲ್ ಕ್ಲಿಯರ್ ತೆಗೆದುಕೊಳ್ಳುವುದರಿಂದ 66/11 ಕೆ.ವಿ ಅರೇಹಳ್ಳಿ ಮತ್ತು ಹಾನಬಾಳು ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ 11 ಕೆ.ವಿ ಮೂರಕಗಳ ಗ್ರಾಹಕರಿಗೆ ಜೂ.02, 04, 08, 10, 12, 15, 17, 18, 22 ಮತ್ತ 23 ರಂದು ಬೆಳಗ್ಗೆ 8 ಗಂಟೆಯಿಂದ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಮೋಕ್ಷ ಪಡೆಯಲು ಜ್ಞಾನವೇ ನೇರ ಸಾಧನ: ಚುಂಚಶ್ರೀ

ಭಕ್ತಿ, ನಾಮಸ್ಮರಣೆ, ಉಪಾಸನೆಯಿಂದ ಮನಸ್ಸು ಶುದ್ಧಗೊಂಡಾಗ ಆತ್ಮಜ್ಞಾನ ಉದಯ

• ಪ್ರಜೋದಯ ವರದಿ

ಬೇಲೂರು: ಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳ 22ನೇ ವರ್ಷದ ಪುಣ್ಯಸಂಸ್ಮರಣೆ ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಪೀಠಾಧ್ಯಕ್ಷರು ಆಧ್ಯಾತ್ಮಿಕತೆ, ಸಮಾಜಸೇವೆ, ಶಿಕ್ಷಣ ಹಾಗೂ ಭಾರತೀಯ ಸಂಸ್ಕೃತಿಯ ಮೌಲ್ಯಗಳ ಕುರಿತು ಮಹತ್ವದ ಸಂದೇಶಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು, ಮೋಕ್ಷವನ್ನು ಪಡೆಯಲು ಜ್ಞಾನವೇ ನೇರ ಸಾಧನವಾಗಿದ್ದರೂ ಭಕ್ತಿ, ಉಪಾಸನೆ ಮತ್ತು ನಿಸ್ವಾರ್ಥ ಸೇವೆ ಅದರ ಅಡಿಪಾಯವಾಗಿವೆ ಎಂದು ತಿಳಿಸಿದರು.

ಆದಿ ಶಂಕರಾಚಾರ್ಯರ ವಿವೇಕ ಚೂಡಾಮಣಿ ಗ್ರಂಥವನ್ನು ಉಲ್ಲೇಖಿಸಿದ ಅವರು, ತಪಸ್ಸು, ದಾನ ಹಾಗೂ ಇತರ ಸಾಧನೆಗಳಿದ್ದರೂ ಜ್ಞಾನವಿಲ್ಲದೆ ಮೋಕ್ಷ ಸಾಧ್ಯವಿಲ್ಲ. ಭಕ್ತಿ, ನಾಮಸ್ಮರಣೆ ಮತ್ತು ಉಪಾಸನೆಯಿಂದ ಮನಸ್ಸು ಶುದ್ಧಗೊಂಡಾಗ ಆತ್ಮಜ್ಞಾನ ಉದಯಿಸುತ್ತದೆ ಎಂದ ಅವರು, ನಿಸ್ವಾರ್ಥ ಕರ್ಮ ಮತ್ತು ಸೇವಾಭಾವದಿಂದ ಕರ್ಮಬಂಧನಗಳು ನಿವಾರಣೆಯಾಗುತ್ತವೆ ಎಂದು ತಿಳಿಸಿದರು.

ಮಠ- ಮಂದಿರಗಳಲ್ಲಿ ಸೇವೆ ಸಲ್ಲಿಸುವವರು ಪ್ರತಿಫಲದ ನಿರೀಕ್ಷೆಯಿಲ್ಲದೆ ಕಾರ್ಯ ನಿರ್ವಹಿಸಬೇಕು ಎಂದು ಕರೆ ನೀಡಿದ ಅವರು, ಉಚಿತ ಆರೋಗ್ಯ ಸಂಚಾರಿ ವಾಹನ ಸೇವೆಯಂತಹ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪರಮ ಪೂಜ್ಯ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾ ಸ್ವಾಮೀಜಿ ಅವರು, ಪುಷ್ಪಗಿರಿ ಮಹಾಸಂಸ್ಥಾನ ಮಠವು ಸಮಾಜ ಸೇವೆ, ಶಿಕ್ಷಣ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ನಿರಂತರ ಸೇವೆ ಸಲ್ಲಿಸುತ್ತಿದ್ದು, ಭಕ್ತರ ಸಹಕಾರದಿಂದ ರಾಜ್ಯದ ಪ್ರಮುಖ ಮಠಗಳಲ್ಲಿ ಒಂದಾಗಿ ಬೆಳೆದಿದೆ. ಹೊಯ್ಸಳರ ಕಾಲದಿಂದಲೂ ಮಠವು ಜನಸೇವೆಯ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ ಎಂದು ತಿಳಿಸಿದ ಅವರು, ಸಮಾಜದಲ್ಲಿ ಹೆಚ್ಚುತ್ತಿರುವ ಜಾತಿ, ಮತ ಹಾಗೂ ದ್ವೇಷದ ನಡುವೆಯೂ ಸೌಹಾರ್ದತೆಯ ಸಂದೇಶ ಸಾರುವಲ್ಲಿ ಮಠಗಳು ಪ್ರಮುಖ ಪಾತ್ರ ವಹಿಸುತ್ತಿವೆ ಎಂದರು.

ಕ್ಷೇತ್ರದ ಅಭಿವೃದ್ಧಿಗೆ ಸಮಾಜದ ಸಹಭಾಗಿತ್ವ ಅಗತ್ಯವಿದ್ದು, ಮಠದ ಬೆಳವಣಿಗೆಯಲ್ಲಿ ಭಕ್ತರ ತನು-ಮನ-ಧನದ ಸಹಕಾರ ಮಹತ್ವದ್ದಾಗಿದೆ ಎಂದು ಹೇಳಿದರು.

ಇದೇ ವೇಳೆ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ನಾಯಕತ್ವವನ್ನು ಪ್ರಶಂಸಿಸಿ, ಆದಿಚುಂಚನಗಿರಿಯನ್ನು ವಿಶ್ವಮಟ್ಟದ ಆಧ್ಯಾತ್ಮಿಕ ಕೇಂದ್ರವನ್ನಾಗಿ ಬೆಳೆಸಿರುವುದು ಅವರ ದೂರದೃಷ್ಟಿಯ ಫಲ ಎಂದು ಶ್ಲಾಘಿಸಿದರು.

ಪರಮಪೂಜ್ಯ ಜಗದ್ಗುರು ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮೀಜಿ, ಆದಿಚುಂಚನಗಿರಿ ಶಾಖಾಮಠದ ಶಂಭುನಾಥ ಮಹಾಸ್ವಾಮೀಜಿ, ವಿವಿಧ ಮಠಾಧೀಶರು ಆಧ್ಯಾತ್ಮಿಕತೆ, ಸಮಾಜಸೇವೆ ಮತ್ತು ಸಾಂಸ್ಕೃತಿಕ ಸಾಮರಸ್ಯದ ಮಹತ್ವದ ಸಂದೇಶವನ್ನು ಸಾರಿದರು.

ಗಣ್ಯರು, ಭಕ್ತರು ಹಾಜರಿದ್ದರು.

ಕಟ್ಟಡ ತ್ಯಾಜ್ಯಗಳ ವಿಲೇವಾರಿ ನಿಷೇಧ

• ಪ್ರಜೋದಯ ವರದಿ

ಅರಕಲಗೂಡು: ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಸಾರ್ವಜನಿಕರು ಹಾಗೂ ಕಟ್ಟಡ ನಿರ್ಮಾಣ ಮಾಡುವ ಮಾಲೀಕರು ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷಗಳ ತ್ಯಾಜ್ಯ ನಿರ್ವಹಣೆ ನಿಯಮ 2016 ರ ಪ್ರಕಾರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಖಾಲಿ ಜಾಗಗಳಲ್ಲಿ, ರಸ್ತೆ ಬದಿಗಳಲ್ಲಿ, ಕೆರೆ, ನದಿ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಕಟ್ಟಡ ತ್ಯಾಜ್ಯಗಳನ್ನು ವಿಲೇವಾರಿ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷಗಳ ತ್ಯಾಜ್ಯ ನಿರ್ವಹಣೆ ನಿಯಮ 2016 ರ ಪ್ರಕಾರದಡಿ ಉಪನಿಧಿಗಳನ್ನು ಅಳವಡಿಸಿಕೊಂಡಿದ್ದು, ಕಟ್ಟಡ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಲು ಅರಕಲಗೂಡು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ದೇವರಹಳ್ಳಿ ನೆಲಭರ್ತಿ ಜಾಗದಲ್ಲಿ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಸ್ಥಳವನ್ನು ನಿಗಧಿಪಡಿಸಲಾಗಿದ್ದು, ಸಾರ್ವಜನಿಕರು ಕಟ್ಟಡದ ಭಗ್ನಾವಶೇಷಗಳನ್ನು ತಮ್ಮದೇ ವೆಚ್ಚದಲ್ಲಿ ಈ ಜಾಗಕ್ಕೆ ಸಾಗಿಸತಕ್ಕದ್ದು, ಸದರಿ ನಿಯಮಾವಳಿಗಳ ಅನ್ವಯ ಪಟ್ಟಣ ಪಂಚಾಯಿತಿ ನಿಗಧಿಪಡಿಸಲಾಗಿರುವ ಸ್ಥಳಗಳನ್ನು ಹೊರತುಪಡಿಸಿ ಬೇರೆ ಜಾಗದಲ್ಲಿ ವಿಲೇವಾರಿ ಮಾಡುವುದು ಕಂಡುಬಂದಲ್ಲಿ ರೂ. 500 ದಂಡ ವಿಧಿಸಲಾಗುವುದು.

ಸಾರ್ವಜನಿಕರು ಬಯಸಿದ್ದಲ್ಲಿ ಅರಕಲಗೂಡು ಪಟ್ಟಣ ಪಂಚಾಯಿತಿಗೆ ಸೇವಾ ಶುಲ್ಕ ಭರಿಸಿ ವಾಹನದಲ್ಲಿ ಕಟ್ಟಡ ತ್ಯಾಜ್ಯ ವಸ್ತುಗಳನ್ನು ನೆಲಭರ್ತಿ ಜಾಗಕ್ಕೆ ಸಾಗಿಸುವ ಸೇವೆಯನ್ನು ಪಡೆಯಬಹುದಾಗಿದೆ.

ಹೆಚ್.ಸಿ.ಶ್ರೀಕಂಠಯ್ಯ ಸ್ಮರಣಾರ್ಥ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಜಿಲ್ಲೆಯ ಮೇರು ರಾಜಕಾರಣಿ, ಮಾಜಿ ಸಚಿವ ದಿ|| ಹೆಚ್.ಸಿ.ಶ್ರೀಕಂಠಯ್ಯ ನವರ ಜನ್ಮ ಶತಮಾನೋತ್ಸವದ ಅಂಗವಾಗಿ ತಾಲ್ಲೂಕಿನ ಹೆಚ್.ಸಿ.ಶ್ರೀಕಂಠಯ್ಯ ಸೇವಾ ಸಮಿತಿಯು ಜೂನ್ 5 ರಿಂದ 7 ರವರೆಗೆ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಸೇವಾ ಸಮಿತಿ ಅಧ್ಯಕ್ಷ ವಿ.ಎನ್.ಅಶೋಕ್ ಹೇಳಿದರು.

ಪಟ್ಟಣದ ದಿ.ಹೆಚ್.ಸಿ.ಶ್ರೀಕಂಠಯ್ಯ ಸಭಾಂಗಣದಲ್ಲಿ ವಾಲಿಬಾಲ್ ಪಂದ್ಯಾವಳಿ ಕುರಿತಾಗಿ ನಡೆದ ಸೇವಾ ಸಮಿತಿ ಸದಸ್ಯರು ಮತ್ತು ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಕಂಡ ಧೀಮಂತ ನಾಯಕ, ಮಾಜಿ ಸಚಿವ ಹೆಚ್. ಸಿ. ಶ್ರೀಕಂಠಯ್ಯನವರ 100ನೇ ವರ್ಷದ ಜನ್ಮ ದಿನಾಚರಣೆಯನ್ನು ತಾಲ್ಲೂಕಿನಲ್ಲಿ ಸ್ಮರಣೀಯವಾಗಿ ಆಚರಿಸುವ ನಿರ್ಧಾರವನ್ನು ಅವರ ಕುಟುಂಬ ವರ್ಗ ಮತ್ತು ಶ್ರೀಕಂಠಯ್ಯ ನವರ ಅನುಯಾಯಿಗಳು, ಕಾರ್ಯಕರ್ತರು ಮಾಡಿದ್ದು, ಜುಲೈ 18ರಂದು ಆಚರಣೆಗೆ ಸಕಲ ಸಿದ್ದತೆಯನ್ನು ಮಾಡಿಕೊಳ್ಳಲಾಗಿದೆ. ಇದರ ಸಲುವಾಗಿ ಶ್ರೀಕಂಠಯ್ಯನವರ ಮೊಮ್ಮಗ ಕವಿಕಾ ಅಧ್ಯಕ್ಷ ಹೆಚ್.ಸಿ.ಲಲಿತ್ ರಾಘವ್ ರವರು ಈಗಾಗಲೇ ತಮ್ಮ ತಾತನ ಸ್ಮರಣಾರ್ಥ ಹತ್ತಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದ್ದಾರೆ. ತಾಲ್ಲೂಕಿನ ವಿದ್ಯಾವಂತ ನಿರುದ್ಯೋಗಿಗಳು ಕೆಲಸ ಪಡೆಯಲು ನೆರವಾಗಲು, 2ಸಾವಿರ ಯುವಕರಿಗೆ ಕೌಶಲ್ಯ ತರಬೇತಿ, ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್, ಕಂಪ್ಯೂಟರ್ ಕಲಿಕೆಯಂತಹ ತರಬೇತಿ ಕಾರ್ಯಕ್ರಮಗಳು, ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಗುಡಿಕೈಗಾರಿಕೆಗಳ ತರಬೇತಿ, ಅರ್ಥಿಕ ನೆರವು ನೀಡುವ ಕೆಲಸ ಮಾಡುತ್ತಿದ್ದಾರೆ ಎಂದರು.

ಜೂನ್ 5 ರಿಂದ 7ರವರೆಗೆ ಮೂರು ದಿನಗಳು ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿ ಅಣ್ಣಯ್ಯ ಕಪ್‌ನ್ನು ಪಟ್ಟಣದ ಮಾಧ್ಯಮಿಕ ಶಾಲಾ ಆವರಣದಲ್ಲಿ ಆಯೋಜಿಸಿದ್ದು, ಪಂದ್ಯಾವಳಿಯ ಆಯೋಜನೆಯ ರೂಪರೇಷೆಗಳನ್ನು ಕವಿಕಾ ಅಧ್ಯಕ್ಷ ಹೆಚ್.ಸಿ.ಲಲಿತ್‌ರಾಘವ್ ಅವರ ಸಲಹೆ, ಸೂಚನೆ ಮೇರೆಗೆ ನಡೆಸಿದ್ದು, ತಂಡಗಳ ಜರ್ಸಿ ಅನಾವರಣಗೊಳಿಸಲಾಗಿದ್ದು, ಹೆಚ್ಚಿನ ತಂಡಗಳು ಭಾಗವಹಿಸಲಿವೆ ಎಂದರು.

ಸೇವಾಸಮಿತಿ ನಿರ್ದೇಶಕ, ತಾಲ್ಲೂಕು ಗ್ಯಾರಂಟಿ ಸಮಿತಿ ಸದಸ್ಯ ಮಿಲ್ಕ್ ಮಂಜು ಮಾತನಾಡಿ, ಹೆಚ್.ಸಿ.ಶ್ರೀಕಂಠಯ್ಯನವರ ಹೆಸರಿನಲ್ಲಿ ಅಣ್ಣಯ್ಯ ಕಪ್ ಎಂಬ ವಾಲಿಬಾಲ್ ಪಂದ್ಯಾವಳಿಗೆ ದೇಶದ ಹಲವು ರಾಜ್ಯಗಳಿಂದ ಆಯ್ದ ಅತ್ಯುತ್ತಮ ತಂಡಗಳು ಭಾಗಿಯಾಗಲಿವೆ. ಹೊನಲು ಬೆಳಕಿನ ಪಂದ್ಯಾವಳಿಯಾಗಿದ್ದು, ಮೊದಲನೇ ಬಹುಮಾನವಾಗಿ 1.5 ಲಕ್ಷ ರೂ. ದ್ವಿತೀಯ ಬಹುಮಾನವನ್ನು 1.4 ಲಕ್ಷ ರೂ, ತೃತೀಯ ಬಹುಮಾನವಾಗಿ 1.3 ಲಕ್ಷ ರೂ ಮತ್ತು ನಾಲ್ಕನೇ ಬಹುಮಾನವಾಗಿ 1.20 ಲಕ್ಷ ರೂ. ನೀಡಲಿದ್ದೇವೆ ಎಂದು ಮಾಹಿತಿ ನೀಡಿದರು.

ಈ ವೇಳೆ ಹೆಚ್.ಸಿ.ಶ್ರೀಕಂಠಯ್ಯ ಸೇವಾ ಸಮಿತಿ ಪದಾಧಿಕಾರಿಗಳಾದ ಹೆಚ್.ಜಿ.ಮಂಜೇಗೌಡ, ಗೋವಿಂದ್ ರಾಜು, ಅಗ್ರಹಾರ ಗಿರೀಶ್, ಹೆಚ್.ಎಂ.ಜಯರಾಮ್, ಸಿ.ಟಿ.ರಮೇಶ್, ಶಿವಸ್ವಾಮಿ, ವಿಶ್ವನಾಥ್, ಸಿ.ಟಿ. ಅಶೋಕ್‌ಕುಮಾರ್, ಸುಜಾತ, ಉಮಾಶಂಕರ್, ಕೆ.ಜಿ.ಬಾಬು. ಗನ್ನಿ ಗಿರೀಶ್, ರುದ್ರೇಶ್ ಸೇರಿ ಇತರರು ಉಪಸ್ಥಿತರಿದ್ದರು.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಹಾಸನ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಎಸ್.ಎಸ್.ಎಲ್.ಸಿ. ಮತ್ತು ಮೆಟ್ರಿಕ್ ನಂತರದ ಕೋರ್ಸ್‌ಗಳಾದ ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿಭಾಗಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ 2025-2026ನೇ ಸಾಲಿನ ಶೈಕ್ಷಣಿಕ ವರ್ಷದ ಸಾಲಿನಲ್ಲಿ ಪ್ರೋತ್ಸಾಹಧನ ಮಂಜೂರು ಮಾಡಲಾಗುತ್ತಿದೆ, ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ವಿಳಾಸ www.sw.kar.nic.in ನಲ್ಲಿ ಅರ್ಜಿ ಸಲ್ಲಿಸಿ ದಾಖಲಾತಿಗಳನ್ನು ಆಯಾ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಿಸಿ, ಹಾಸನ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರ ಕಚೇರಿಗೆ ಸಲ್ಲಿಸಲು ತಿಳಿಸಿದ್ದಾರೆ.

ಯುವ ಕಲಾವಿದರಿಂದ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2026-27ನೇ ಸಾಲಿನಲ್ಲಿ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಸಾಂಸ್ಕೃತಿಕ ಸೌರಭ, ಯುವ ಸೌರಭ ಮತ್ತು ಚಿಗುರು ಕಾರ್ಯಕ್ರಮಗಳನ್ನು ಆಯೋಜಿಸಲು ಶಾಸ್ತ್ರೀಯ ಸಂಗೀತ, ಕರ್ನಾಟಕ /ಹಿಂದೂಸ್ತಾನಿ ಗಾಯನ ವಾದ್ಯ ಸಂಗೀತ, ಸುಗಮ ಸಂಗೀತ, ವಚನ ಸಂಗೀತ, ಜನಪದ ಗೀತೆಗಳು, ಸಮೂಹ ನೃತ್ಯ /ನೃತ್ಯ ರೂಪಕ, ಜನಪದ ಪ್ರದರ್ಶನ ಕಲಾ ತಂಡಗಳು, ನಾಟಕ, ಯಕ್ಷಗಾನ, ಮೂಡಲ ಪಾಯ, ಬಯಲಾಟ, ಗೊಂಬೆಮೇಳ, ಗಮಕ /ಕಥಾ ಕೀರ್ತನಾ, ಏಕ ಪಾತ್ರಾಭಿನಯ ಇತ್ಯಾದಿ ಕಲೆಗಳಲ್ಲಿ ಪರಿಣತ ಪ್ರತಿಭಾವಂತ ಯುವ ಕಲಾವಿದರಿಂದ ಅರ್ಜಿ ಆಹ್ವಾನಿಸ ಲಾಗಿದೆ.

ಯುವ ಸೌರಭ: ಕಾರ್ಯಕ್ರಮಕ್ಕೆ 15 ರಿಂದ 30 ವರ್ಷ ವಯೋಮಾನದ ಪ್ರತಿಭಾವಂತ ಯುವ ಕಲಾವಿದರು ಅರ್ಜಿ ಸಲ್ಲಿಸಬಹುದಾಗಿದೆ.

ಚಿಗುರು: ಅರ್ಜಿ ಸಲ್ಲಿಸುವವರು 8 ರಿಂದ 14 ವರ್ಷ ವಯೋಮಾನದ ಪ್ರತಿಭಾವಂತ ಮಕ್ಕಳು ಅರ್ಜಿ ಸಲ್ಲಿಸಬಹುದು.

ಅರ್ಜಿಗಳನ್ನು ಜೂ.26 ರೊಳಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಲು ತಿಳಿಸಿದ್ದು, ವಿವರಗಳಿಗೆ ಕಚೇರಿಯ ದೂ. ಸಂಖ್ಯೆ: 08172 267162ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ನವದೆಹಲಿ ಇವರ ವತಿಯಿಂದ 2026 ನೇ ಸಾಲಿನ ಡಿಸೆಂಬರ್ 3 ರಂದು ಆಚರಿಸಲಾಗುವ ವಿಶ್ವ ವಿಕಲಚೇತನ ದಿನಾಚರಣೆ ಸಮಾರಂಭದಲ್ಲಿ ವಿಕಲಚೇತನರ ವಿವಿಧ ಕ್ಷೇತ್ರಗಳಲ್ಲಿ ಸಬಲೀಕರಣ, ಪುನರ್ವಸತಿ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಉದ್ಯೋಗ, ಸೃಷ್ಟಿ, ತಡೆರಹಿತ ವಾತಾವರಣ, ಸಂಶೋಧನೆ, ನಾವಿನ್ಯತೆ, ಕ್ರೀಡೆ, ಕಲೆ, ಸಾಹಿತ್ಯ ಮತ್ತು ಇತರೆ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ವ್ಯಕ್ತಿಗಳ ವಿವರದ ಸಾರಾಂಶ, ಉದಾಹರಣೆ ಸಾಮಗ್ರಿ, ಮಾದರಿ, ಇತ್ತೀಚಿನ 2 ಪಾಸ್ ಪೋರ್ಟ್ ಸೈಜಿನ ಭಾವಚಿತ್ರಗಳೊಂದಿಗೆ ವೆಬ್‌ಸೈಟ್ ವಿಳಾಸ www.depwd.gov.in ಪರಿ ಶೀಲಿಸಿದ (www.awards.gov.in ವೆಬ್‌ಸೈಟ್ ಮೂಲಕ ಜುಲೈ 31 ರೊಳಗೆ ಅಗತ್ಯ ದಾಖಲಾತಿಗಳೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ದೂ.ಸಂಖ್ಯೆ: 08172-264546/ 295546 ಸಂಪರ್ಕಿಸಬಹುದಾಗಿದೆ.

ಒಂದೇ ತಿಂಗಳಲ್ಲಿ ಅಧಿಕಾರ ಕಳೆದುಕೊಂಡ ನಾಲ್ವರು ಹಿಂದೂ ವಿರೋಧಿ ಸಿ.ಎಂ.ಗಳು

• ಪ್ರಜೋದಯ ವರದಿ

ಬೆಂಗಳೂರು: ಹಿಂದುತ್ವವನ್ನು ವಿರೋಧಿಸುತ್ತಿದ್ದ ನಾಲ್ವರು ಮುಖ್ಯಮಂತ್ರಿಗಳು ಒಂದೇ ತಿಂಗಳಲ್ಲಿ ಅಧಿಕಾರ ಕಳೆದುಕೊಂಡಿದ್ದಾರೆ ಎಂದು ಬಿಜೆಪಿ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು ವ್ಯಂಗ್ಯವಾಡಿದ್ದಾರೆ.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡಿದ್ದು ಡಿಕೆ ಶಿವಕುಮಾರ್ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಮಧ್ಯೆ, ಇಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಛಲವಾದಿ ನಾರಾಯಣಸ್ವಾಮಿ, ಮುಖ್ಯಮಂತ್ರಿಗಳು ಸಿಎಂ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ. ಆ ಜಾಗಕ್ಕೆ ಡಿಕೆ ಶಿವಕುಮಾರ್ ಬರುತ್ತಿದ್ದಾರೆ. ಇಲ್ಲಿ ವ್ಯಕ್ತಿ ಬದಲಾಗಿದ್ದಾರೆ. ಆದರೆ ವ್ಯವಸ್ಥೆ ಬದಲಾಗಲ್ಲ ಎಂದು ಕುಹಕವಾಡಿದರು.

ಕಳೆದ ಪಂಚ ರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಮಮತಾ ಬ್ಯಾನರ್ಜಿ, ತಮಿಳುನಾಡಿನ ಡಿಎಂಕೆ ಪಕ್ಷದ ಮುಖ್ಯಸ್ಥ, ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಹಾಗೂ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರ ಪತನಗೊಂಡಿತ್ತು. ಇನ್ನು ಮಮತಾ ಬ್ಯಾನರ್ಜಿ ಹಾಗೂ ಎಂಕೆ ಸ್ಟಾಲಿನ್ ಹೀನಾಯವಾಗಿ ಸೋಲು ಕಂಡಿದ್ದರು.

'ಆಪರೇಷನ್ ಸಿಂದೂರ್ 2.0'ಗೆ ಭಾರತೀಯ ಸೇನೆ ಸಿದ್ಧ

ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ

• ಪ್ರಜೋದಯ ವರದಿ

ಪುಣೆ: ಅಗತ್ಯವಿದ್ದಲ್ಲಿ 'ಆಪರೇಷನ್ ಸಿಂದೂರ್ 2.0'ಗೆ ಸಶಸ್ತ್ರ ಪಡೆಗಳು ಸಂಪೂರ್ಣವಾಗಿ ಸಿದ್ಧವಾಗಿವೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಶನಿವಾರ ಹೇಳಿದ್ದಾರೆ.

ಭೂ ಸೇನೆ, ವಾಯುಪಡೆ ಮತ್ತು ನೌಕಾಪಡೆಗಳನ್ನು ಮೀರಿದ ಆಧುನಿಕ ಮಲ್ಟಿ- ಡೊಮೇನ್ ಯುದ್ಧಕ್ಕಾಗಿ ಈ ಮೂರು ಸೇವೆಗಳು ಸಿನರ್ಜಿಯನ್ನು ಹೆಚ್ಚಿಸುತ್ತಿವೆ ಎಂದು ದ್ವಿವೇದಿ ಅವರು ಪ್ರತಿಪಾದಿಸಿದರು.

ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಯಲ್ಲಿ ನಡೆದ 150ನೇ ಕೋರ್ಸ್‌ನ ಪಾಸಿಂಗ್-ಔಟ್ ಪೆರೇಡ್‌ನ ಸಂದರ್ಭದಲ್ಲಿ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡಿದ ಜನರಲ್ ದ್ವಿವೇದಿ ಅವರು, ಪ್ರಸ್ತುತ ಯುದ್ಧದ ಪರಿಸ್ಥಿತಿ ಇಲ್ಲವಾದರೂ, ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಮೂರು ಸೇನೆಗಳು ತೀವ್ರ ತಯಾರಿ ನಡೆಸುತ್ತಿವೆ ಎಂದು ಹೇಳಿದರು.

ಏಪ್ರಿಲ್‌ನಲ್ಲಿ 26 ಜೀವಗಳನ್ನು ಬಲಿತೆಗೆದುಕೊಂಡ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ ಭಾರತವು ಮೇ 2025 ರಲ್ಲಿ ಪಾಕಿಸ್ತಾನದಲ್ಲಿ ಭಯೋತ್ಪಾದಕ ಮೂಲಸೌಕರ್ಯವನ್ನು ನಾಶ ಮಾಡಲು ಆಪರೇಷನ್ ಸಿಂದೂರ್ ಎಂಬ ಮಿಲಿಟರಿ ಕಾರ್ಯಾಚರಣೆ ನಡೆಸಿತು.

ಆಪರೇಷನ್ ಸಿಂದೂರ್ ಇನ್ನು ಮುಂದುವರೆಯುತ್ತಿದೆ. ಇದು ತಾತ್ಕಾಲಿಕವಾಗಿ ನಿಂತಿದೆ. ಭಾರತೀಯ ಸೇನೆ ಮತ್ತು ಎಲ್ಲಾ ಮೂರು ಸೇನೆಗಳು ಕೂಡ ಆಪರೇಷನ್ ಸಿಂದೂರ್ 2.0 ಅಗತ್ಯಬಿದ್ದಲ್ಲಿ ಅದಕ್ಕೆ ಸೂಕ್ತ ಸಿದ್ಧತೆ ನಡೆಸುತ್ತಿವೆ. ಸದ್ಯ ನಾವು ನಮ್ಮ ಮೂರು ಸೇನೆಗಳಲ್ಲಿ ನಮ್ಮ ಸಿನರ್ಜಿಯನ್ನು ಹೆಚ್ಚಿಸುವತ್ತ ಗಮನ ಹರಿಸುತ್ತಿದ್ದೇವೆ. ಮುಂದಿನ ಯುದ್ಧಕ್ಕೆ ನಮ್ಮನ್ನು ಸಜ್ಜುಗೊಳಿಸಿಕೊಳ್ಳುತ್ತಿದ್ದೇವೆ ಎಂದರು.

ಭವಿಷ್ಯದ ಸಂಘರ್ಷಗಳು ಬಾಹ್ಯಾಕಾಶ, ಸೈಬರ್ ಮತ್ತು ಅರಿವಿನ ಯುದ್ಧದಂತಹ ಉದಯೋನ್ಮುಖ ಕ್ಷೇತ್ರಗಳಿಂದ ಹೆಚ್ಚು ಪ್ರಭಾವಿತವಾಗುತ್ತವೆ ಎಂದು ಅವರು ಹೇಳಿದರು.

ಯುದ್ಧಭೂಮಿ ಎಷ್ಟು ಪಾರದರ್ಶಕ ವಾಗಿದೆಯೆಂದರೆ ಪ್ರತಿಯೊಂದು ಚಲನವಲನವೂ ಇನ್ನೊಂದು ಬದಿಗೆ ತಿಳಿದಿದೆ. ಆದ್ದರಿಂದ, ನಮ್ಮ ನಿಯೋಜನೆ, ಉದ್ಯೋಗ ಮತ್ತು ಗಡಿ ಪ್ರದೇಶಗಳಲ್ಲಿನ ನಮ್ಮ ಪಡೆಗಳನ್ನು ಹಾಗೂ ನಾಗರಿಕರನ್ನು ರಕ್ಷಿಸಲು ಅಗತ್ಯವಿರುವ ರಕ್ಷಣೆಯ ವಿಷಯದಲ್ಲಿ ನಾವು ಬಹಳ ಜಾಗರೂಕರಾಗಿರಬೇಕು ಎಂದು ತಿಳಿಸಿದರು.

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಪ್ರವಾಶಕ್ಕೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹೊಳೆನರಸೀಪುರ: ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026-27 ನೇ ಸಾಲಿಗೆ ಪರಿಶಿಷ್ಟ ಜಾತಿ/ವರ್ಗದ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಉಚಿತ ಪ್ರವೇಶಾತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಹೊಳೆನರಸೀಪುರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ವಿದ್ಯಾರ್ಥಿ ನಿಲಯಗಳ ಹೆಸರು: ಹೊಳೆನರಸೀಪುರ ಟೌನ್ ಡಾ.ಬಿ ಆರ್ ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಡಾ.ಬಿ ಆರ್ ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹೊಳೆನರಸೀಪುರ ಟೌನ್, ಎಲೇಚಾಗಹಳ್ಳಿ, ಹಿರೇಹಳ್ಳಿಕೊಪ್ಪಲು, ಚಾಕೇನಹಳ್ಳಿ, ದೊಡ್ಡಕುಂಚೆ, ಹಡವನಹಳ್ಳಿ, ಜೋಡಿಗುಬ್ಬಿ, ಹಳ್ಳಿಮೈಸೂರು ಮತ್ತು ಪ.ವರ್ಗದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಆನೇಕನ್ನಂಬಾಡಿ.

ಅರ್ಜಿ ಸಲ್ಲಿಸಲು ಬೇಕಾಗಿರುವ ದಾಖಲಾತಿಗಳು: ವಿದ್ಯಾರ್ಥಿ ಮತ್ತು ಪೋಷಕರ ಆಧಾರ್ ಕಾರ್ಡ್, ಎಸ್ ಎಸ್ ಪಿ ಐ ಡಿ ಸಂಖ್ಯೆ, ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ (5 ವರ್ಷದ ಒಳಗೆ ಚಾಲ್ತಿಯಲ್ಲಿರುವುದು), ಬ್ಯಾಂಕ್ ಪಾಸ್ ಬುಕ್ ಪ್ರತಿ, ಹಿಂದಿನ ವರ್ಷದ ಅಂಕಪಟ್ಟಿ, 03 ಪಾಸ್ ಪೋರ್ಟ್ ಸೈಜ್ ಫೋಟೋ.

ಅರ್ಹ ಪ.ಜಾತಿ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್ ಸೈಟ್ www.sw.kar.nic.in https://swdhmis. Karnataka. gov.in ನಲ್ಲಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿ ನಿಲಯಗಳಿಗೆ http://admissions. kar.nic.in/ hosteladmission ನಲ್ಲಿ ಜೂ.30 ರೊಳಗೆ ಅರ್ಜಿ ಸಲ್ಲಿಸಿ ಸಂಬಂಧಪಟ್ಟ ಶಾಲಾ ಮುಖ್ಯೋಪಾದ್ಯಾಯರೊಂದಿಗೆ ದೃಢೀಕರಿಸಿ ಹೊಳೆನರಸೀಪುರ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ (ಗ್ರೇಡ್-2) ಕಚೇರಿಗೆ ಸಲ್ಲಿಸಲು ತಿಳಿಸಿದ್ದಾರೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ನೇರವಾಗಿ ಸಂಪರ್ಕಿಸಬಹುದಾಗಿದೆ.

ವಿವಿಧ ವೃತ್ತಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಹಾಸನ: ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು 2026 ನೇ ಸಾಲಿನಲ್ಲಿ ವಿವಿಧ ವೃತ್ತಿ ಕೋರ್ಸ್‌ಗಳಲ್ಲಿ ಐ.ಟಿ.ಐ ತರಬೇತಿಗಾಗಿ ಎಸ್.ಎಸ್.ಎಲ್.ಸಿ ಉತ್ತೀರ್ಣ ಮತ್ತು ಅನುತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಂದ, ಆನ್-ಲೈನ್ ಪ್ರವೇಶದ ನಂತರದ ಉಳಿದಿರುವ ಸ್ಥಾನಗಳ ಭರ್ತಿಗಾಗಿ ಆಫ್-ಲೈನ್ ನಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ ಮೆಕಾನಿಕ್, ಟರ್ನರ್, ಎಲೆಕ್ಟ್ರೀಷಿಯನ್, ಆರ್.ಎ.ಸಿ ಟೆಕ್ನಿಷಿಯನ್, ಫಿಟ್ಟರ್, ಮಷಿನಿಸ್ಟ್, ಕೋಪಾ, ವೆಲ್ಡರ್, ಎಂ.ಇ.ವಿ, ಸಿ.ಎನ್.ಸಿ ಟೆಕ್ನಿಷಿಯನ್ ಸೇರಿದಂತೆ ಒಟ್ಟು 14 ವೃತ್ತಿ ಕೋರ್ಸ್‌ಗಳಲ್ಲಿ ಸೀಟು ಲಭ್ಯವಿದ್ದು, ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ, ಐ.ಟಿ.ಐ ತರಬೇತಿಯನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸಂಸ್ಥೆಯಲ್ಲಿ ಖುದ್ದು ಜೂ.01 ರಿಂದ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗೂ ಮಾಹಿತಿಯನ್ನು ಐ.ಟಿ.ಐ ಸಂಸ್ಥೆಗೆ ಭೇಟಿ ನೀಡಿ ಪಡೆಯಬಹುದು.

'ಚಕೋರ ಉಪನ್ಯಾಸ ಮಾಲಿಕೆ'ಯಲ್ಲಿ ಕ.ಸಾ.ಅ. ಅಧ್ಯಕ್ಷ ಮುಕುಂದರಾಜ್ ಅಭಿಮತ

ತೃತೀಯ ಲಿಂಗಿಗಳ ಬದುಕಿಗೆ ಗೌರವ ಸಿಗಬೇಕು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತೃತೀಯ ಲಿಂಗಿಗಳ ಬಗೆ ನಾಗರೀಕ ಸಮಾಜ ಅಸಹಾಯಕತೆ ಬೆಳೆಸಿಕೊಳ್ಳಬಾರದು, ಅವರು ಕೂಡ ಈ ಸಮಾಜದಲ್ಲಿ ಬದುಕುವ ಹಕ್ಕು ಹೊಂದಿರುವವರು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹೇಳಿದರು.

ಕರ್ನಾಟಕ ಸಾಹಿತ್ಯ ಆಕಾಡೆಮಿ ಸಹಯೋಗದಲ್ಲಿ ಪಟ್ಟಣದಲ್ಲಿನ ವೈದ್ಯ ಪ್ಯಾರಮೆಡಿಕಲ್ ಕಾಲೇಜಿನಲ್ಲಿ ನಡೆದ ಚಕೋರ ಉಪನ್ಯಾಸ ಮಾಲಿಕೆ-14 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತೃತೀಯ ಲಿಂಗಿಗಳು ಎಲ್ಲ ರೀತಿಯ ಗೌರವಯುತ ಬದುಕು ನಡೆಸಲು ಹಕ್ಕದಾರರು, ಇದನ್ನು ಅರ್ಥ ಮಾಡಿಕೊಳ್ಳದ ನಾಗರೀಕ ಸಮಾಜ ಅವರನ್ನು ಕೀಳಿರಮೆಯಿಂದ ನೋಡುತ್ತಿದೆ. ಅವರ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಸುತ್ತಿದೆ. ಅವರಿಗೆ ಸೂಕ್ತ ಉದ್ಯೋಗವಿಲ್ಲದೇ ಬೀಕ್ಷೆ ಬೇಡುವ ಸ್ಥಿತಿ ಇಂದಿಗೂ ಇರುವುದು ಶೋಚನೀಯ, ಹೊಟ್ಟೆಪಾಡಿಗಾಗಿ ಕೆಲವರು ಲೈಂಗಿಕ ಅಲ್ಪಸಂಖ್ಯಾತರಾಗಿದ್ದು ಅವರ ಮೇಲೆ ರೌಡಿಗಳು, ಕೆಲ ಪೊಲೀಸ್‌ನವರಿಂದ ಅನ್ಯಾಯ, ಅತ್ಯಚಾರಕ್ಕೊಳವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಇಂದಿನ ಯುವಕರು, ವಿದ್ಯಾರ್ಥಿಗಳು ಅವರ ಕುರಿತಾಗಿ ಕೀಳರಿಮೆ, ಅಸಹಾಯಕತೆ ಬೆಳೆಸಿಕೊಳ್ಳಬಾರದು, ಅವರು ಬದುಕು, ಜೀವನವನ್ನು ಅವರ ಕುರಿತಾಗಿ ಬಂದಿರುವ ಕೃತಿ, ಸಿನಿಮಾಗಳ ಮೂಲಕ ತಿಳಿಯಬೇಕು, ದೇಹದಲ್ಲಿ ಹಾರ್ಮೋನ್‌ಗಳ ವ್ಯತ್ಯಾಸದಿಂದ ಉಂಟಾಗುವ ಅವರ ಭಾವನೆ, ನಡವಳಿಕೆ, ರೀತಿ, ನೀತಿಗಳನ್ನು ಸಮಾಜ ಒಪ್ಪಿಕೊಳ್ಳಬೇಕು. ಮನುಷ್ಯ ಸಾಹಿತ್ಯವನ್ನು ಓದಬೇಕು, ಆಗ ಎಂತಹ ಕ್ರೂರಿಯೂ ಉತ್ತಮ ಮನುಷ್ಯನಾಗಲು ಸಾಧ್ಯವೆಂದರು.

ಕನ್ನಡ ಸಾಹಿತ್ ಪರಿಷತ್ತಿನ ಅಧ್ಯಕ್ಷ ಡಾ.ಹೆಚ್.ಎನ್.ಮಲ್ಲೇಶ್‌ಗೌಡ ಮಾತನಾಡಿ, ಸಾಹಿತ್ಯ ಅಕಾಡೆಮಿಯೂ ಪ್ರತಿ ತಿಂಗಳಿಗೊಮ್ಮೆ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಉಪನ್ಯಾಸ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ಚಕೋರ ಉಪನ್ಯಾಸ ಮಾಲಿಕೆಯನ್ನು ಹುಟ್ಟುಹಾಕಿದ್ದು ಆಕಾಡೆಮಿ ಅಧ್ಯಕ್ಷರಾದ ಎಲ್.ಎನ್.ಮುಕುಂದರಾಜ್ ಅವರು. ಎಳೆಯ ತಲೆಮಾರು ಮಹತ್ತರವಾದ ಚಿಂತನೆಗಳಲ್ಲಿ ತೊಡಗಬೇಕು, ಪ್ರಪಂಚ ದೊಡ್ಡದಿದೆ. ಅದನ್ನು ಆಳವಾಗಿ ಅರಿಯಬೇಕು, ಹೊಸ ಆಲೋಚನೆಗಳನ್ನು ಸೃಷ್ಟಿಸಬೇಕು. ಸಾಹಿತ್ಯ, ಚಿಂತನೆ, ವೈಚಾರಿಕತೆಯತ್ತ ಮುಖ ಮಾಡಬೇಕು ಎಂಬುದು ಆಕಾಡೆಮಿಯ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಹೋರಾಟಗಾರ್ತಿ ವರ್ಷ ಹಾಸನರವರು ಪ್ರಸ್ತುತ ಸಂದರ್ಭದಲ್ಲಿ ತೃತೀಯ ಲಿಂಗಿಗಳ ಬದುಕು ಕುರಿತಾಗಿ ಮಾತನಾಡಿ, ಸರ್ಕಾರ ಅಲ್ಪಸಂಖ್ಯಾತರ ಪರವಾದ ಹಲವು ಬಿಲ್‌ಗಳನ್ನು ತಂದಿದ್ದರೂ ಯಾವುದೂ ಸಮರ್ಪಕವಾಗಿ ಜಾರಿಯಾಗಿಲ್ಲ, ಇಂದಿಗೂ ನಾವುಗಳು ಶೋಷಣೆಗೊಳಗಾಗುತ್ತಿದ್ದೇವೆ. ಬೆಳವಣಿಗೆಯ ಹಂತದಲ್ಲಿ ನಮ್ಮ ಭಾವನೆಗಳು ಬದಲಾಗಿ, ತೃತೀಯ ಲಿಂಗಿಗಳಾಗಿ ಮಾರ್ಪಡುವ ನಮಗೆ ಮೊದಲಿಗೆ ನಮ್ಮ ಮನೆಯಿಂದಲೇ ಕೀಳರಿಮೆ ಆರಂಭವಾಗುತ್ತದೆ. ಮನೆಯಿಂದ ಆಚೆ ಹಾಕುತ್ತಾರೆ. ಉದ್ಯೋಗ, ವಿದ್ಯೆಯಿಲ್ಲದೇ ನಾವು ನಮ್ಮ ಹೊಟ್ಟೆಪಾಡಿಗಾಗಿ ಬೀಕ್ಷೆ, ಲೈಂಗಿಕ ಕಾರ್ಯಕರ್ತರಾಗಬೇಕಾಗಿದೆ. ನಮ್ಮ ಬಗೆ ಇರುವ ಕೀಳರಿಮೆ ಇಂದಿನ ಸಮಾಜದಲ್ಲಿ ಕಡಿಮೆಯಾಗಬೇಕಾದರೇ ಪಠ್ಯದಲ್ಲಿ ನಮ್ಮ ಬದುಕಿನ ಕುರಿತು ಸೇರ್ಪಡೆಯಾಗಬೇಕೆಂದರು.

ಸಾಹಿತ್ಯ ಆಕಾಡೆಮಿಯ ಸದಸ್ಯ ಸಂಚಾಲಕಿ, ಹಿರಿಯ ಕವಚಿತ್ರಿ ಎಚ್.ಆರ್.ಸುಜಾತ, ವೈದ್ಯ ಪ್ಯಾರಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಬಿ.ಎಲ್.ಅರುಣ್‌ಕುಮಾರ್ ಇದ್ದರು.

ಪ್ರತಿಯೊಬ್ಬರೂ ಸ್ವ-ಇಚ್ಛೆಯಿಂದ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿ

ಘನ ತ್ಯಾಜ್ಯ ನಿರ್ವಹಣೆ ವಸ್ತುಪ್ರದರ್ಶನ | ಮ್ಯಾರಥಾನ್‌ಗೆ ಶಾಸಕ ಸಿ.ಎನ್.ಬಾಲಕೃಷ್ಣ ಚಾಲನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಸ್ವಚ್ಛತೆ ಎನ್ನುವುದು ಯಾರೋ ಒಬ್ಬರಿಗೆ ಅಥವಾ ಯಾವುದೋ ಒಂದು ವರ್ಗಕ್ಕೆ ಸೀಮಿತವಾದ ಕಾರ್ಯವಲ್ಲ. ಅದು ಪ್ರತಿಯೊಬ್ಬರ ಕರ್ತವ್ಯ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಪುರಸಭೆ ವತಿಯಿಂದ ಸಾರ್ವಜನಿಕರಲ್ಲಿ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಯ ಜಾಗೃತಿ ಮೂಡಿಸಲು ಸ್ವಚ್ಛ ಭಾರತ್ ಮಿಷನ್ 2.0ರ ಅಡಿಯಲ್ಲಿ ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಯಡಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ ವಸ್ತುಪ್ರದರ್ಶನ ಹಾಗೂ ಮ್ಯಾರಥಾನ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಯಾರದೋ ಒತ್ತಾಯಕ್ಕೆ, ಯಾರದೋ ತೋರಿಕೆಗೆ ನಡೆಸುವ ಬದಲು ಪ್ರತಿಯೊಬ್ಬರೂ ಸ್ವ-ಇಚ್ಛೆಯಿಂದ ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾದಾಗ ಮಾತ್ರ ಅದರ ಆಶಯ ಸಂಪೂರ್ಣ ಯಶಸ್ಸು ಕಾಣುತ್ತದೆ ಎಂದರು.

ಘನತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮ-2026 ಕಾಯ್ದೆ ಪಾಲನೆ ಕಡ್ಡಾಯವಾಗಿದ್ದು, 2026 ಏಪ್ರಿಲ್ 1ರಿಂದ ಜಾರಿಗೆ ಬಂದಿದೆ. ಹಸಿ-ಒಣ ತ್ಯಾಜ್ಯದೊಂದಿಗೆ ಇದೀಗ ಮತ್ತೆರಡು ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಚಿಂತನೆ ನಡೆಸಿದ್ದು, ಸಾರ್ವಜನಿಕರು ಇನ್ಮುಂದೆ ಮೂಲದಲ್ಲಿಯೇ ಕಸಗಳನ್ನು ವಿಂಗಡಣೆ ಮಾಡಬೇಕಾಗಿದೆ. ಪ್ರತಿ ಮನೆಯಿಂದ ನಾಲ್ಕು ತರಹದ ಕಸವನ್ನು ವಿಂಗಡೆ ಮಾಡಿ ಕೊಡಲೇಬೇಕಿದೆ ಎಂದು ತಿಳಿಸಿದರು.

ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಹಾಗೂ ವಿಶೇಷ ಕಾಳಜಿ ತ್ಯಾಜ್ಯ ಸಂಗ್ರಹಿಸಿ ನೀಡುವಂತೆ ಸಾರ್ವಜನಿಕ ನಿರ್ದೇಶನ ನೀಡಲಾಗಿದೆ. ಪಟ್ಟಣದಲ್ಲಿ ನಿತ್ಯ ಮನೆ ಬಾಗಿಲಿಗೆ ಕಸದ ಗಾಡಿಗಳು ಬರುತ್ತಿವೆ. ಈ ಸಮಯದಲ್ಲಿ ಬಹಳಷ್ಟು ಮಂದಿ ಹೊರಗೆ ಬಂದು ಕಸಕೊಡದೇ, ಗಾಡಿ ತೆರಳಿದ ನಂತರ ಚರಂಡಿಗಳಿಗೆ, ರಸ್ತೆ ಬದಿಗಳಲ್ಲಿ ಬೀಸಾಡುತ್ತಿದ್ದಾರೆಂದು ಅಸಮಾಧಾನ ವ್ಯಕ್ತಪಡಿಸಿದರು.

ಹೀಗಾಗಿ ನಗರ ಸ್ವಚ್ಛಮುಕ್ತವಾಗಲು ಸಾಧ್ಯವಾಗುತ್ತಿಲ್ಲ. ಎಲ್ಲರೂ ತಪ್ಪದೆ ಕಸವನ್ನು ಬುಟ್ಟಿಗೆ ಅಥವಾ ಕಸದ ಗಾಡಿಗೆ ಕೊಟ್ಟರೆ ಪಟ್ಟಣ ಸ್ವಚ್ಛ ನಗರವಾಗುದರಲ್ಲಿ ಸಂಶಯವಿಲ್ಲ. ಪಟ್ಟಣ ಸುಂದರ ಹಾಗೂ ಸದಾ ಸ್ವಚ್ಛವಾಗಿರಬೇಕಾದರೆ ಸಾರ್ವಜನಿಕರ ಸಹಕಾರವೂ ಅತೀ ಮುಖ್ಯ. ನಿತ್ಯ ಉತ್ಪತ್ತಿಯಾಗುವ ತ್ಯಾಜ್ಯವನ್ನು ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡುವ ಮನಸ್ಥಿತಿ ಪ್ರತಿಯೊಬ್ಬರಲ್ಲಿಯೂ ಇರಬೇಕು. ಪ್ರತಿನಿತ್ಯ ಅಡುಗೆ ಮನೆಗಳಲ್ಲಿ ಸಂಗ್ರಹವಾಗುವ ಕಸವನ್ನು ಬೇರ್ಪಡಿಸಿ ಕಸದ ಗಾಡಿಗಳಿಗೆ ತಪ್ಪದೇ ಕಸವನ್ನು ಕೊಡಬೇಕು ಎಂದು ಸೂಚಿಸಿದರು.

ಎಲ್ಲೆಂದರಲ್ಲಿ ಕಸ ಹಾಗೂ ಪ್ಲಾಸ್ಟಿಕ್ ಬಾಟಲ್‌ಗಳನ್ನು ಬಿಸಾಡಬಾರದು ಮತ್ತು ಪ್ಲಾಸ್ಟಿಕ್ ಬಳಕೆ ಸಂಪೂರ್ಣವಾಗಿ ಕಡಿಮೆ ಮಾಡಬೇಕು. ಪರಿಸರ ಮಾಲಿನ್ಯದಿಂದ ಸಾಕಷ್ಟು ರೋಗರುಜಿನಗಳು ಉಂಟಾಗಿ ನಂತರದಲ್ಲಿ ಪಶ್ಚಾತಾಪ ಪಡುವುದಕ್ಕಿಂತ ಮೊದಲೇ ಪ್ರತಿಯೊಬ್ಬರೂ ಮರಗಿಡಗ ಳನ್ನು ಬೆಳೆಸುವುದರ ಮುಖಾಂತರ, ಪರಿಸರವನ್ನು ಉತ್ತಮವಾಗಿಡುವಲ್ಲಿ ಶ್ರಮಿಸಬೇಕು. ಸ್ವಚ್ಛತೆ ಕಾದುಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕನ ಹೆಗಲಿಗಿದ್ದು, ನಾವು ನಮ್ಮ ಪರಿಸರವನ್ನು ಶುಚಿತ್ವದಿಂದ ಕಾದುಕೊಂಡಲ್ಲಿ ಆರೋಗ್ಯದ ಮೇಲೆ ಯಾವುದೇ ಕೆಟ್ಟ ಪರಿಣಾಮ ಬೀರುವುದಿಲ್ಲ ಎಂದು ತಿಳಿಸಿದರು.

ಪುರಸಭಾ ಮುಖ್ಯಾಧಿಕಾರಿ ಆರ್.ಯತೀಶ್ ಕುಮಾರ್ ಮಾತನಾಡಿ, ಘನತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮ-2026 ಕಾಯ್ದೆ ಪಾಲನೆ ಕಡ್ಡಾಯವಾಗಿದ್ದು, 2026ರ ಏಪ್ರಿಲ್ 1ರಿಂದ ಜಾರಿಗೆ ಬಂದಿದೆ. ಅದುವರೆಗೆ ಘನತ್ಯಾಜ್ಯ ವಸ್ತುಗಳ ನಿರ್ವಹಣೆ-2016ರ ಪ್ರಕಾರ ಹಸಿ (ಅಡುಗೆ ಮನೆ ಹಾಗೂ ತರಕಾರಿ) ಹಾಗೂ ಒಣ ಕಸ (ಮರುಬಳಕೆ ಮಾಡಬಹುದಾದ ಪ್ಲಾಸ್ಟಿಕ್, ಕಾಗದ, ಲೋಹ ಇತ್ಯಾದಿ) ವಿಂಗಡಣೆ ಮಾಡುವುದು ಕಡ್ಡಾಯವಾಗಿತ್ತು. ಇದೀಗ 2026ರ ನಿಯಮಗಳ ಪ್ರಕಾರ ಇವೆರಡರ ಜೊತೆಗೆ ಸ್ಯಾನಿಟರಿ ತ್ಯಾಜ್ಯ (ಡೈಪರ್ರ, ಪ್ಯಾಡ್, ನಿರೋಧಗಳು) ಹಾಗೂ ವಿಶೇಷ ಕಾಳಜಿ ತ್ಯಾಜ್ಯ (ಗಾಜು, ಬಲ್ಬ್, ಬ್ಯಾಟರಿ, ಔಷಧಿ ಬಾಟಲ್, ಬಣ್ಣದ ಡಬ್ಬ, ಕ್ರಿಮಿನಾಶಕ ಡಬ್ಬ, ಬಳಸಿದ ಸೂಜಿ, ಸಿರಿಂಜ್ ಇತ್ಯಾದಿ) ವಸ್ತುಗಳನ್ನು ಕೂಡ ಪ್ರತ್ಯೇಕವಾಗಿ ನೀಡಬೇಕಿದೆ ಎಂದರು.

ಹೊಸ ನಿಯಮಗಳನ್ನು ಅನುಷ್ಠಾನಕ್ಕೆ ತರುವುದು, ಪಾಲನೆ ಮಾಡುವುದು ಕಡ್ಡಾಯ. ಹೀಗಾಗಿ ಮನೆಗಳಿಂದ, ಪಟ್ಟಣದಲ್ಲಿ ಕಸ ಸಂಗ್ರಹಿಸುವ ಆಟೋ ಟಿಪ್ಪರ್ ಕಸ ಸಂಗ್ರಹಕಾರರಿಗೆ ಈಗಾಗಲೇ ಮಾಹಿತಿ ನೀಡಲಾಗಿದೆ. ನಂತರ ವಾರ್ಡ್‌ವಾರು, ಆಟೋ ಟಿಪ್ಪರ್‌ಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯನಡೆಯುತ್ತಿದೆ. ಇನ್ಮುಂದೆ ಹಸಿ- ಒಣ ತ್ಯಾಜ್ಯವನ್ನು ಪತ್ಯೇಕವಾಗಿ ಮೂಲದಲ್ಲಿಯೇ ವಿಂಗಡಿಸಿ ಕೊಡುವುದು ಕಡ್ಡಾಯವಾಗಲಿದೆ ಎಂದು ತಿಳಿಸಿದರು.

ಪಟ್ಟಣದ ಫೋಕಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಪುರಸಭೆ ಸಹಯೋಗದೊಂದಿಗೆ ಘನ ತ್ಯಾಜ್ಯ ನಿರ್ವಹಣೆ ಅಂಗವಾಗಿ ಆಯೋಜಿಸಲಾಗಿದ್ದ ಸ್ವಚ್ಛತಾ ಮ್ಯಾರಥಾನ್‌ಗೆ ಶಾಸಕ ಸಿ.ಎನ್. ಬಾಲಕೃಷ್ಣ ಚಾಲನೆ ನೀಡಿದರು. ಘನತ್ಯಾಜ್ಯ ವಿಲೇವಾರಿ, ಹಸಿ ಕಸ, ಒಣ ಕಸ ಹಾಗೂ ಸ್ಯಾನಿಟರಿ ಕಸ ವಿಂಗಡಣೆ, ಆರಂಭದಲ್ಲಿ ತ್ಯಾಜ್ಯವನ್ನು ಸಂಸ್ಕರಿಸುವ, ಏಕ ಬಳಕೆ ಪ್ಲಾಸ್ಟಿಕ್ ಬಳಕೆ ನಿಷೇಧ, ರಸ್ತೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಬಿಸಾಡದಿರುವುದು. ಖಾಲಿ ನಿವೇಶನಗಳಲ್ಲಿ ಕಸ ಹಾಕದಿರುವುದು ಸೇರಿ ಇನ್ನಿತರ ವಿಷಯಗಳ ಕುರಿತು ನಾಗರಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಘನತ್ಯಾಜ್ಯ ಸಮರ್ಪಕ ನಿರ್ವಹಣೆ ಕುರಿತು ಭಿತ್ತಿ ಪತ್ರ ಹಂಚಲಾಯಿತು.

ರಸ್ತೆಯುದ್ದಕ್ಕೂ ಜಾಗೃತಿ ಘೋಷಣೆಗಳನ್ನು ಕೂಗುತ್ತ ನಾಗರಿಕರಲ್ಲಿ ಅರಿವು ಮೂಡಿಸಲಾಯಿತು. ಪುರಸಭಾ ಪರಿಸರ ಅಭ್ಯಂತರೆ ಕಾವ್ಯಶ್ರೀ, ಕಚೇರಿ ವ್ಯವಸ್ಥಾಪಕಿ ಎಲ್.ಬಿ. ಆಶಾದೇವಿ, ಹಿರಿಯ ಆರೋಗ್ಯ ನಿರೀಕ್ಷಕ ಕೆ. ಎಚ್. ಮೂರ್ತಿ, ಸಮುದಾಯ ಸಂಘಟಕಿ ಶಾರದಮ್ಮ, ಕಿರಿಯ ಅಭಿಯಂತರ ಎಸ್.ಇ. ಗಿರೀಶ್, ಪೌರಕಾರ್ಮಿಕರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಆಸ್ತಿ ಹಾನಿ: ಯಶ್ ತಾಯಿ ಎಸ್‌ಪಿಗೆ ದೂರು

• ಪ್ರಜೋದಯ ವರದಿ

ಹಾಸನ: ವಿದ್ಯಾನಗರದಲ್ಲಿರುವ ಚಲನಚಿತ್ರ ನಟ ಯಶ್ ಅವರ ತಾಯಿ ಪುಷ್ಪ ಅವರು ತಮ್ಮ ಮಾಲೀಕತ್ವದ ಶೆಡ್, ಕಾಂಪೌಂಡ್ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರನ್ನು ಭೇಟಿಯಾಗಿ ದೂರು ಸಲ್ಲಿಸಿದರು.

ಬೆಳಿಗ್ಗೆ ಕಚೇರಿಗೆ ಆಗಿಸಿದ್ದ ಪುಷ್ಪ ಅವರು ಎಸ್‌ಪಿ ಭೇಟಿಗೆ ಸುಮಾರು ಒಂದು ಗಂಟೆಗೂ ಅಧಿಕ ಸಮಯ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಕಾದು ಕುಳಿತಿದ್ದರು. ಆದರೆ, ಶುಭನ್ವಿತ ಅವರು ಸಕಲೇಶಪುರಕ್ಕೆ ತೆರಳಿದ್ದರಿಂದ ವಾಪಸ್ಸಾದರು. ಪುನಃ ಸಂಜೆ ಆಗಮಿಸಿ ದೂರು ದಾಖಲಿಸುವಂತೆ ಮನವಿ ಮಾಡಿದರು.

ಮೂರು ದಿನಗಳ ಹಿಂದೆ ಪೊಲೀಸ್ ಮಹಾ ನಿರ್ದೇಶಕರನ್ನು ಭೇಟಿಯಾಗಿದ್ದ ಯಶ್ ತಾಯಿ, ಸುಮಾರು 30 ಲಕ್ಷ ರೂ. ಮೊತ್ತದ ವಸ್ತುಗಳು ಹಾನಿಯಾಗಿದ್ದರು, ಘಟನೆ ಸಂಬಂಧ ದೇವರಾಜ್ ಹಾಗು ಧರ್ಮಸೇರಿ ಹಲವರ ವಿರುದ್ಧ ದೂರು ನೀಡಿದರೂ ಪ್ರಕರಣ ದಾಖಲು ಮಾಡದೆ ಎನ್‌ಸಿಆರ್ ದಾಖಲು ಮಾಡಿದ್ದಾರೆಂದು ಬಡಾವಣೆ ಠಾಣೆ ಪೊಲೀಸರ ವಿರುದ್ಧ ಆರೋಪಿಸಿದ್ದಾರೆ. ಇದುವರೆಗೂ ಎಫ್‌ಐಆರ್ ದಾಖಲು ಮಾಡದ ಹಿನ್ನಲೆ ಡಿಜಿಟಲ್ ಸಾಕ್ಷಿಗಳ ಜೊತೆ ಹಾಸನದ ಜೆಎಂಎಫ್‌ಸಿ ಕೋರ್ಟ್‌ಗೆ ಪುಷ್ಪಾ ಸಂಬಂಧಿ ದುರ್ಗಾಪ್ರಸಾದ್ ಖಾಸಗಿ ದೂರು ದಾಖಲಿಸಿದ್ದು, ದೂರು ಆಧರಿಸಿ ಪ್ರಕರಣ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿಗೆ ಕೋರ್ಟ್ ನಿರ್ದೇಶನ ನೀಡಿತ್ತು. ಕೋರ್ಟ್ ಸೂಚನೆಯಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೂರು ಸ್ವೀಕರಿಸಿ, ಪ್ರಕರಣ ದಾಖಲಿಸುವಂತೆ ಬಡಾವಣೆ ಠಾಣೆ ಪೊಲೀಸರಿಗೆ ಸೂಚಿಸಿದ್ದಾರೆ.

ರಾಜ್ಯದ ಅಭಿವೃದ್ಧಿ ಬಂಡಿ ಎಳೆದೊಯ್ಯುವ ಜವಾಬ್ದಾರಿ ನಿಮ್ಮದು

» ಮೊದಲನೇ ಪುಟದಿಂದ

ಜೊತೆಯಲ್ಲಿ ರಾಜ್ಯವನ್ನು ಅಭಿ ವೃದ್ಧಿಯ ಪಥದಲ್ಲಿ ಮುನ್ನಡೆಸುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದ ಹಿರಿಯರು ತ್ಯಾಗ-ಬಲಿದಾನಗಳ ಮೂಲಕ ಕಟ್ಟಿದ ಸೌಹಾರ್ದ ಭಾರತ ವನ್ನು ಜಾತಿ-ಧರ್ಮಗಳ ಹೆಸರಲ್ಲಿ ಒಡೆದು ಹಾಕಲಾಗುತ್ತಿದೆ. ಸಂವಿಧಾನವನ್ನೇ ಪ್ರಶ್ನಿಸಲಾಗುತ್ತಿದೆ. ಪ್ರಭುತ್ವವನ್ನು ಪ್ರಶ್ನಿಸುವವರ ದಮನ ಮಾಡಲಾಗುತ್ತಿದೆ. ಗಾಂಧಿಯವರನ್ನು ಕೊಂದವರು ಇಂದು ಗೋಡ್ಸೆಯನ್ನು ಮೆರೆಸಲು ಹೊರಟಿದ್ದಾರೆ. ಸಂವಿಧಾ ನದ ಆಶಯಗಳಾದ ಸಮಾನತೆ, ಸೌಹಾರ್ದತೆ, ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತತೆಯ ಮೌಲ್ಯಗಳನ್ನೇ ತನ್ನ ಸಿದ್ಧಾಂತವಾಗಿ ಸ್ವೀಕರಿಸಿರುವ ಕಾಂಗ್ರೆಸ್ ಪಕ್ಷವನ್ನು ಸೈದ್ಧಾಂತಿಕವಾಗಿ ತಳಮಟ್ಟದಿಂದಲೇ ಗಟ್ಟಿಗೊಳಿಸಲು ಮುಂದಾಗುವುದೇ ದೇಶವನ್ನು ಉಳಿಸಲು ನಮಗೆ ಇರುವ ಏಕೈಕ ಮತ್ತು ಸರಿ ಯಾದ ದಾರಿಯಾಗಿದೆ. ದೇಶದ ಏಕತೆ, ಸಮಗ್ರತೆಯನ್ನು ಉಳಿಸಲು ಸಂವಿಧಾನದ ಗೌರವ ವನ್ನು ಕಾಪಾಡಲು 2ನೇ ಸ್ವಾತಂತ್ರ್ಯ ಹೋರಾಟ ನಡೆಸಬೇಕಾಗಿರುವ ಕಾಲಘಟ್ಟದಲ್ಲಿ ನಾವಿ ದ್ದೇವೆ. ಈ ಹೋರಾಟದಲ್ಲಿ ಇಡೀ ಶಾಸಕಾಂಗ ಪಕ್ಷ ಮಾತ್ರವಲ್ಲ ರಾಜ್ಯದ ಏಳು ಕೋಟಿ ಜನತೆ ನಿಮ್ಮ ಜೊತೆಯಲ್ಲಿರುತ್ತಾರೆ. ನಿಮಗೆ ಸದಾ ಯಶಸ್ಸು ಸಿಗಲಿ ಎಂಬ ಸಂದೇಶ ರವಾನಿಸಿದ್ದಾರೆ.

ಧರ್ಮಸೇನಗೆ ಪರಿಷತ್ ಸದಸ್ಯ ಸ್ಥಾನ ನೀಡಲು ಒತ್ತಾಯ

• ಪ್ರಜೋದಯ ವರದಿ

ಹಾಸನ: ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಿ, ಸಚಿವ ಸ್ಥಾನ ನೀಡುವಂತೆ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಸಂಚಾಲಕ ಎಂ.ಜೆ.ಲಕ್ಷ್ಮಣ್ ಅವರು ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರ್ಮಸೇನ ಅವರು ನಾಲ್ಕು ದಶಕ ಗಳಿಗೂ ಹೆಚ್ಚು ಕಾಲ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದು, ಪಕ್ಷ ಸಂಘಟನೆ ಹಾಗು ದಲಿತ ಸಮುದಾಯದ ಸಬಲೀಕರಣಕ್ಕಾಗಿ ನಿರಂತರವಾಗಿ ದುಡಿಯುತ್ತಿದ್ದಾರೆಂದು ಹೇಳಿದರು.

ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಹಾಗು ಪ್ರಸ್ತುತ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಅವರಿಗೆ ಆಡಳಿತಾತ್ಮಕ ಮತ್ತು ರಾಜಕೀಯ ಅನುಭವವಿದೆ. ಮೈಸೂರು ವಿಭಾಗದಲ್ಲಿ ಪರಿಶಿಷ್ಟ ಜಾತಿಯ ಎಡಗೈ ಸಮುದಾಯಕ್ಕೆ ಸಮರ್ಪಕ ರಾಜಕೀಯ ಪ್ರಾತಿನಿಧ್ಯ ಇಲ್ಲದಿರುವ ಹಿನ್ನಲೆ ಧರ್ಮಸೇನ ಅವರಿಗೆ ಅವಕಾಶ ನೀಡುವುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅಗತ್ಯ ವಾಗಿದೆ ಎಂದು ಹೇಳಿದರು.

ಧರ್ಮಸೇನ ಅವರ ತಂದೆ ಎನ್.ರಾಚಯ್ಯ ಅವರು 1952ರಲ್ಲಿ ಸಂಸದರಾಗಿ, 1957ರಲ್ಲಿ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಿಂದ ಗೆದ್ದು ಮಂತ್ರಿಯಾಗಿದ್ದರು. ಈ ಸಂದರ್ಭದಲ್ಲಿ ಎಲ್ಲಾ ಜಾತಿಯ ಬಡವರು ಮತ್ತು ದಲಿತರ ಕಲ್ಯಾಣಕ್ಕೆ ಶಕ್ತಿಮೀರಿ ಶ್ರಮಿಸಿದ್ದಾರೆ. ಮೈಸೂರು ವಿಭಾಗದಲ್ಲಿ ಎಡಗೈ ಸಮುದಾಯದ ಯಾವೊಬ್ಬ ಶಾಸಕರು ಇಲ್ಲ. ಆದ್ದರಿಂದ ಕಾಂಗ್ರೆಸ್ ಹೈಕಮಾಂಡ್ ಅವರ ಅನುಭವ ಮತ್ತು ಸೇವೆಯನ್ನು ಪರಿಗಣಿಸಿ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಿ, ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡರಾದ ಕಬ್ಬಳ್ಳಿ ರಾಮಚಂದ್ರ, ಸೋಮಣ್ಣ, ಮಹಾದೇವ್, ಹರೀಶ್ ಇತರರುಇದ್ದರು.

ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಗೆ ಆಗ್ರಹ

» ಮೊದಲನೇ ಪುಟದಿಂದ

ಹೆಚ್ಚಿಸಲಿವೆ ಹಾಗು ಕಾರ್ಮಿಕರು ಹೋರಾಟಗಳಿಂದ ಪಡೆದ ಹಕ್ಕುಗಳನ್ನು ಮೊಟಕುಗೊಳಿಸಲಿವೆ. ಈ ಸಂಹಿತೆಗಳನ್ನು ಯಥಾವತ್ತಾಗಿ ರಾಜ್ಯದಲ್ಲಿ ಜಾರಿಗೆ ತರಬಾರದು. ಸಂವಿಧಾನದತ್ತವಾದ ಅಧಿಕಾರವನ್ನು ಬಳಸಿ ರಾಜ್ಯ ಸರ್ಕಾರವು ಈ ಸಂಹಿತೆಗಳಿಗೆ ಕಾರ್ಮಿಕರ ಪರವಾದ ಕರ್ನಾಟಕ ತಿದ್ದುಪಡಿಗಳನ್ನು ತಂದ ನಂತರವೇ ನಿಯಮ ರೂಪಿಸಬೇಕೆಂದು ಆಗ್ರಹಿಸಿದರು.

ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿರುವ ಹಂಗಾಮಿ, ಗುತ್ತಿಗೆ, ಟ್ರೈನಿ ಮತ್ತಿತರ ಖಾಯಂಯೇತರ ಕಾರ್ಮಿಕರು ಕಡಿಮೆ ವೇತನಕ್ಕೆ, ಯಾವುದೇ ಕಾನೂನು ಬದ್ಧ ಸವಲತ್ತುಗಳಿಲ್ಲದೆ ಅಭದ್ರತೆಯಲ್ಲಿ ದುಡಿಯುತ್ತಿದ್ದಾರೆ. ಪ್ರಸ್ತುತ ಸರ್ಕಾರದಡಿಯಲ್ಲಿರುವ ಸೊಸೈಟಿ ಮಾದರಿಯನ್ನು ಕೈಬಿಟ್ಟು, ಖಾಯಂಯೇತರ ಕಾರ್ಮಿಕರನ್ನು ಖಾಯಂಗೊಳಿಸಲು ಶಾಸನ ರೂಪಿಸಬೇಕೆಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಖಜಾಂಚಿ ಅರವಿಂದ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಮಂಜುಳ, ಗ್ರಾಮ ಪಂಚಾಯಿತಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಟಿ. ಹೊನ್ನೇಗೌಡ, ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಸೌಮ್ಯ ಮತ್ತು ಸಿಐಟಿಯುನ ಪದಾಧಿಕಾರಿಗಳು ಹಾಗೂ ಪ್ರತಿಭಟನೆಯಲ್ಲಿ ನೂರಾರು ಕಾರ್ಮಿಕರು ಭಾಗವಹಿಸಿದ್ದರು.

ಶಿಕ್ಷಣ ವ್ಯವಸ್ಥೆಯಲ್ಲಿ ಭಾಷಾ ವಿಷಯ ಕಡೆಗಣನೆ

» ಮೊದಲನೇ ಪುಟದಿಂದ

ತಮ್ಮ ಗುರಿಯಿಂದ ದೂರ ವಾಗುತ್ತಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ಸಮಯವನ್ನು ಸದ್ಬಳಕೆ ಮಾಡಿಕೊಂಡು ಶಿಕ್ಷಣದ ಕಡೆ ಹೆಚ್ಚಿನ ಗಮನ ಹರಿಸಬೇಕು. ಇಂದು ಜ್ಞಾನ ಮತ್ತು ಶಿಕ್ಷಣದ ಮೂಲಕ ಯಾವುದೇ ಕ್ಷೇತ್ರದಲ್ಲಾದರೂ ಸಾಧನೆ ಮಾಡುವ ಅವಕಾಶ ಗಳಿವೆ. ಗ್ರಾಮೀಣ ಪ್ರದೇ ಶದ ವಿದ್ಯಾರ್ಥಿಗಳೂ ತಮ್ಮ ಪ್ರತಿಭೆ, ಪರಿಶ್ರಮ ಹಾಗೂ ಆತ್ಮವಿಶ್ವಾಸದ ಮೂಲಕ ಉನ್ನತ ಸಾಧನೆ ಮಾಡಬಹುದೆಂದು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಹಾಗು ಸಮಾಜಮುಖಿ ಹೋರಾಟಗಾರರು ಮತ್ತು ಶಿಕ್ಷಕರನ್ನು ಗೌರವಿಸುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತಮ್ಮಲ್ಲಿರುವ ಸಂಕುಚಿತ ಮನೋಭಾವವನ್ನು ತೊರೆದು ಆತ್ಮವಿಶ್ವಾಸದಿಂದ ಮುಂದೆ ಸಾಗಬೇಕೆಂದು ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ ಹೆತ್ತೂರು ಹೋಬಳಿ ಘಟಕದ ಅಧ್ಯಕ್ಷ ಹೆಚ್.ಪಿ. ರವಿಕುಮಾರ್ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಬೆಳೆಸುವುದು ಹಾಗು ಅವರ ಪ್ರತಿಭೆ ಮತ್ತು ಸಾಧನೆಯನ್ನು ಗುರುತಿಸಿ ಸಮಾಜದ ಗಮನಕ್ಕೆ ತರುವುದು ಘಟಕದ ಪ್ರಮುಖ ಉದ್ದೇಶವಾಗಿದೆ ಎಂದರು.

ಎಸ್‌ಎಸ್‌ಎಲ್‌ಸಿ ಹಾಗು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಕನ್ನಡ ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ 19 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ರಾಜ್ಯ ಮಟ್ಟದ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ದಲಿತ ಮುಖಂಡ ಹೆಚ್.ಎನ್.ಅಣ್ಣಯ್ಯ ಹಾಗು 32 ವರ್ಷಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗುತ್ತಿರುವ ಎಂ.ಎಸ್. ದೇವಕಿ ಅವರನ್ನು ಸನ್ಮಾನಿಸಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಶ್ಮಿತಾ, ಕೆಪಿಎಸ್ ಶಾಲೆಯ ಪ್ರಾಂಶುಪಾಲ ಮಂಜುನಾಥ್, ಉಪ ಪ್ರಾಂಶುಪಾಲ ಭಾಸ್ಕರ್, ಮುಖ್ಯ ಶಿಕ್ಷಕ ಸತೀಶ್, ಮಲೆನಾಡು ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಸಾಗರ್ ಜಾನಕೆರೆ, ಹೆಚ್.ವಿ.ಸೋಮಶೇಖರ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಇ. ನಾಗಭೂಷಣ, ರಾಜ್ಯ ಕಾರ್ಮಿಕ ಘಟಕದ ಸದಸ್ಯ ಬಿ.ಟಿ.ವಿಜಯ್ ಕುಮಾರ್, ಹೋಬಳಿ ಬೆಳೆಗಾರರ ಸಂಘದ ಅಧ್ಯಕ್ಷ ಹೆಚ್.ಜಿ.ದೇವರಾಜ್, ಹೆತ್ತೂರು ಒಕ್ಕಲಿಗರ ಸಂಘದ ಅಧ್ಯಕ್ಷ ಮೋಹನ್ ಕುಮಾರ್ ಇದ್ದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಮೆಟ್ಟಿಲು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ವಿದ್ಯೆಯನ್ನು ಅರಸಿ ಶಿಸ್ತು, ಶ್ರದ್ಧೆ ಹಾಗೂ ಭಕ್ತಿಯಿಂದ ಮುನ್ನಡೆದವರು ಜೀವನದಲ್ಲಿ ಎಂದಿಗೂ ಸೋಲು ಕಾಣಲು ಸಾಧ್ಯವಿಲ್ಲ ಎಂದು ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ನುಗ್ಗೇಹಳ್ಳಿ ಪುರವರ್ಗ ಹಿರೇಮಠದಲ್ಲಿ ಪ್ರಸ್ತುತ ಸಾಲಿನ ಎಸ್ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.96 ಅಂಕಗಳನ್ನು ಪಡೆದು ಉತ್ತೀರ್ಣಗೊಂಡಿರುವ ವಿದ್ಯಾರ್ಥಿ ಅಭ್ಯುದಯ್ ಅವರಿಗೆ ಅಭಿನಂದಿಸಿ ಮಾತನಾಡಿ, ಎಸ್‌ಎಸ್‌ಎಲ್‌ಸಿ ಫಲಿತಾಂಶ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಮೆಟ್ಟಿಲು. ಸರ್ಕಾರಿ ಉನ್ನತ ಹುದ್ದೆಗಳನ್ನು ಅರಸಿ ತಮ್ಮ ಮಕ್ಕಳಿಗೆ ಹೆಚ್ಚು ಹಣ ವ್ಯಯ ಮಾಡಿ ವಿದ್ಯೆ ಕೊಡಿಸುವ ಬದಲು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ತಲೆ ಎತ್ತಿ ನಿಂತು ಮೌಲ್ಯಯುತ ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಜ್ಞಾನ ಸಂಪಾದಿಸುವಷ್ಟು ವಿದ್ಯೆ ಕಲ್ಪಿಸಿದರೆ ಸಾಕು ಎಂದು ಪಾಲಕರಿಗೆ ಕಿವಿಮಾತು ಹೇಳಿದರು.

ಓದಿದ ಎಲ್ಲರಿಗೂ ಸರ್ಕಾರಿ ಉದ್ಯೋಗ ಸಿಗುವುದು ಸುಲಭದ ಮಾತಲ್ಲ. ಬದಲಿಗೆ ಅಪಾರ ಜ್ಞಾನ ಸಂಪತ್ತು ಪಡೆದು ವಿದ್ಯಾರ್ಥಿಗಳು ಸ್ವಂತ ಕಾಲ ಮೇಲೆ ನಿಂತು ಉದ್ಯೋಗ ಸೃಷ್ಟಿಸಿ ಇತರರಿಗೂ ಉದ್ಯೋಗ ನೀಡುವಂತೆ ಬೆಳೆಯಬೇಕು. ಉದ್ಯೋಗ ಸೃಷ್ಟಿಸಲು ಅನೇಕ ಕ್ಷೇತ್ರ ಗಳು ಕಣ್ಣ ಮುಂದಿವೆ. ಅವುಗಳನ್ನು ಗ್ರಹಿಸುವ ಶಕ್ತಿ ಶಿಕ್ಷಣದಲ್ಲಿದೆ ಎಂದು ತಿಳಿಸಿದರು.

ಇಂದು ಆಧುನಿಕ ಯಂತ್ರೋಪಕರಣಗಳ ನಡುವೆ ಕಣ್ಮರೆಗೆ ಸರಿಯುತ್ತಿರುವ ಮೂಲ ಕೃಷಿ ಪದ್ಧತಿಯನ್ನು ಉಳಿಸಿ ಮುಖ್ಯ ಭೂಮಿಕೆಗೆ ಅಥವಾ ಪ್ರಚಲಿತಕ್ಕೆ ತರಲು ಸಹ ಉತ್ತಮ ಹಾಗೂ ಮೌಲ್ಯಯುತ ಶಿಕ್ಷಣ ಅಗತ್ಯವಿದೆ. ಭೂಮಿ ಹಾಗೂ ಕೃಷಿ ಉಳಿಯಬೇಕೆಂದು ಕಳವಳ ವ್ಯಕ್ತಪಡಿಸಿದರು.

ಸಂಪಾದನೆಗೋಸ್ಕರ ಶಿಕ್ಷಣ ಕಲಿಯುವುದಾದರೆ ಅದು ವ್ಯರ್ಥ. ತನ್ನ ಹಾಗೂ ಸುತ್ತಲಿನ ಸಮಾಜದ ಪರಿವರ್ತನೆಗಾಗಿ ಶಿಕ್ಷಣ ಪಡೆದರೆ ಮಾತ್ರ ಬದುಕು ಸಾರ್ಥಕವಾಗಲಿದೆ. ಜೊತೆಗೆ ಕಲಿತ ವಿದ್ಯೆಯನ್ನು ಇತರರಿಗೆ ದಾನ ಮಾಡುವುದು ಸಹ ಒಂದು ಸಮಾಜ ಸೇವೆ ಎಂದು ಸಲಹೆ ನೀಡಿದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದು ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.96 ರಷ್ಟು ಅಂಕಗಳನ್ನು ಗಳಿಸಿ ಹುಟ್ಟಿದ ಊರು ಹಾಗೂ ಹೆತ್ತವರಿಗೆ ಕೀರ್ತಿ ತಂದಿರುವ ನುಗ್ಗೇಹಳ್ಳಿ ಗ್ರಾಮದ ನೇತ್ರ ಮತ್ತು ಎಂ. ಉಮೇಶ್ ಅವರ ಸುಪುತ್ರ ವಿದ್ಯಾರ್ಥಿ ಅಭ್ಯುದಯ್ ಅವರಿಗೆ ಶ್ರೀಗಳು ಅಭಿನಂದಿಸಿ ಆಶೀರ್ವಾದ ನೀಡಿದರು.

ಶ್ರೀಮಠದ ಸದ್ಭಕ್ತರಾದ ಎನ್.ಕೆ. ಪ್ರಭುಸ್ವಾಮಿ, ಪ್ರಶಾಂತ್ ಕುಮಾರ್ ಹಾಗೂ ಸಿದ್ದಲಿಂಗ ಸ್ವಾಮಿ, ವಿದ್ಯಾರ್ಥಿಯ ಪಾಲಕರಾದ ಶ್ರೀಮತಿ ನೇತ್ರ, ಎಂ.ಉಮೇಶ್ ಮತ್ತು ಕುಟುಂಬ ವರ್ಗ ಹಾಜರಿದ್ದರು.

ಪರಿಸರ ರಕ್ಷಣೆ ಪ್ರತಿಯೊಬ್ಬರು ಹೊಣೆ

• ಪ್ರಜೋದಯ ವರದಿ

ಅರಸೀಕೆರೆ: ಪರಿಸರ ರಕ್ಷಣೆ ಪ್ರತಿಯೊಬ್ಬರು ಹೊಣೆ ಈ ಆಶಯದೊಂದಿಗೆ ಆರಂಭವಾದ ಕರ್ನಾಟಕ ಪರಿಸರ ರಕ್ಷಣಾ ವೇದಿಕೆ ಗ್ರಾಮೀಣ ಭಾಗದಿಂದ ಹಿಡಿದು ನಗರ ವ್ಯಾಪ್ತಿಯಲ್ಲೂ ಜನರಲ್ಲಿ ಪರಿಸರ ಜಾಗೃತಿ ಅರಿವು ಮೂಡಿಸಲಾಗುತ್ತದೆಂದು ಕರ್ನಾಟಕ ಹಸಿರು ಪರಿಸರ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಿ.ಸಿ.ಜಯಣ್ಣ ಹೇಳಿದರು.

ತಾಲ್ಲೂಕು ಘಟಕದ ನೂತನ ಅಧ್ಯಕ್ಷರಾಗಿ ಎಸ್.ವಿಜಯ ಕುಮಾರ್ ಅವರನ್ನು ಘೋಷಿಸಿ ಮಾತನಾಡಿದ ಅವರು, ಪರಸರ ರಕ್ಷಣಾ ವೇದಿಕೆ ರಾಜ್ಯದ ಬಹುತೇಕ ಭಾಗ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದು ಹಸಿರು ಕ್ರಾಂತಿಯ ಸಂಕಲ್ಪದೊಂದಿಗೆ ಪರಿಸರ ರಕ್ಷಣೆಯಲ್ಲಿ ಮನುಷ್ಯರ ಪಾತ್ರ ಮಹತ್ವದ್ದಾಗಿದೆ. ಗಿಡ, ಮರ, ಪ್ರಾಣಿ, ಪಕ್ಷಿ ಹೀಗೆ ಭೂಮಿ ಮೇಲೆ ವಾಸಿಸುವ ಪ್ರತಿಯೊಂದು ಜೀವ ಸಂಕುಲದ ಮಹತ್ವ ಕುರಿತು ಸಂಘವು ಜಾಗೃತಿ ಮೂಡಿಸುತ್ತಿದೆಂದರು.

ತಾಲ್ಲೂಕು ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಎಸ್. ವಿಜಯಕುಮಾರ್ ಮಾತನಾಡಿ, ಬಯಲು ಸೀಮೆಯಾಗಿರುವ ಅರಸೀಕೆರೆ ತಾಲ್ಲೂಕು ಸಾವಿರಾರು ಕೆರೆ ಹಳ್ಳಕೊಳ್ಳಗಳನ್ನು ಹೊಂದಿದ್ದು ಮೈಸೂರು ವಿಭಾಗದಲ್ಲೇ ನಾಗಪುರಿ ಅರಣ್ಯವೆಂಬ ದೊಡ್ಡ ಅರಣ್ಯ ಪ್ರದೇಶ ಹೊಂದಿದ್ದು, ಈ ಅರಣ್ಯ ಪ್ರದೇಶವು ಚಿರತೆ, ಕರಡಿ, ಸಾರಂಗ, ಒಳಗೊಂಡಂತೆ ನೂರಾರು ಬಗೆಯ ಕಾಡು ಪ್ರಾಣಿ ಮತ್ತು ಪಕ್ಷಿಗಳ ಆಶ್ರಯ ತಾಣವಾಗಿದೆ.ತಾಲ್ಲೂಕಿನ ಜನತೆಯಲ್ಲಿ ಅದರಲ್ಲೂ ಯುವ ಜನತೆಯಲ್ಲಿ ಇವುಗಳನ್ನು ಪರಿಚಯಿಸಿ ಕೊಡುವ ಜೊತೆಗೆ ಹಸಿರು ಪರಿಸರ ರಕ್ಷಣೆಗೆ ಪ್ರೇರೇಪಿ ಸುವ ಕೆಲಸವನ್ನು ನೂತನ ತಾಲ್ಲೂಕು ಘಟಕವು ಮಾಡಲಿದೆ ಎಂದು ಭರವಸೆ ನೀಡಿದರು.

ಹಸಿರು ಕರ್ನಾಟಕ ಪರಿಸರ ರಕ್ಷಣಾ ವೇದಿಕೆ(ರಿ.) ರಾಜ್ಯ ಪ್ರಧಾನ ಕಾರ್ಯದರ್ಶಿ ವಿಶು ಕುಮಾರ್, ರಾಜ್ಯ ಸಂಚಾಲಕರು ಮೆಹಬೂಬ್ ಪಾಷ, ಅರಸೀಕೆರೆ ಗ್ರಾಮಾಂತರ ಅಧ್ಯಕ್ಷರಾದ ನರೇಂದ್ರ ಕುಮಾರ್, ಅರಸೀಕೆರೆ ತಾಲ್ಲೂಕು ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷರಾದ ಅಯುಬ್ ಖಾನ್, ಉಪಾಧ್ಯಕ್ಷ ವಾಸಿಂ ಅಕ್ರಮ್ ಹಾಗೂ ಪ್ರಧಾನ ಕಾರ್ಯದರ್ಶಿ ಪರ್ವಿಜ್ ನೂರಿ ಉಪಸ್ಥಿತರಿದ್ದರು.

ಕಾಂಗ್ರೆಸ್‌ನಲ್ಲಿ ಒಬ್ಬ ವ್ಯಕ್ತಿಗೆ ಒಂದೇ ಹುದ್ದೆ: ಸತೀಶ್ ಜಾರಕಿಹೊಳಿ

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಒಬ್ಬ ವ್ಯಕ್ತಿ ಒಂದು ಹುದ್ದೆ ಎಂಬ ಬಗ್ಗೆ ಚರ್ಚೆ ನಡೆಯುತ್ತಿದ್ದು, ನಾಳೆ ಸಂಜೆ ವೇಳೆಗೆ ಎಲ್ಲವೂ ನಿರ್ಧಾರವಾಗಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಯಾಗುವುದು ಖಚಿತ. ಹಾಗಾಗಿ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ಪ್ರಮಾಣ ವಚನ ಸ್ವೀಕಾರ ಹಾಗೂ ಇತರೆ ವಿಚಾರಗಳ ಕುರಿತು ಚರ್ಚಿಸಬಹುದೆಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಹೆಸರಿನಂತೆ, ಮಾಜಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೆಸರು ಕೇಳಿ ಬರುತ್ತಿದೆ. ಬಹುಶಃ ನಾಳೆಯ ಒಳಗೆ ಎಲ್ಲವೂ ಬಗೆಹರಿಯಲಿದೆ. ಹೈಕಮಾಂಡ್ ಎರಡು ಮೂರು ಹೆಸರುಗಳನ್ನು ಪರಿಶೀಲಿಸಿ, ಸೂಕ್ತವಾದವರನ್ನು ಆಯ್ಕೆ ಮಾಡಿಕೊಳ್ಳಲಿದೆ ಎಂದು ಹೇಳಿದರು.

ಪ್ರಧಾನಿ ವಿರುದ್ಧ ಅವಹೇಳನಕಾರಿ ಪೋಸ್ಟ್: ಕ್ರಮಕ್ಕೆ ಮನವಿ

• ಪ್ರಜೋದಯ ವರದಿ

ಹಾಸನ: ಸಾಮಾಜಿಕ ಜಾಲತಾಣಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸಿ ಪೋಸ್ಟ್‌ಗಳನ್ನು ಪ್ರಕಟಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ನರೇಂದ್ರ ಮೋದಿ ಬ್ರಿಗೇಡ್ ಜಿಲ್ಲಾ ಘಟಕದಿಂದ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಲಾಯಿತು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೆ.ಎಂ.ತಮ್ಮಯ್ಯ ಅವರಿಗೆ ಮನವಿ ಸಲ್ಲಿಸಿದ ಸಾಮಾಜಿಕ ಕಾರ್ಯಕರ್ತ ವೇಣುಗೋಪಾಲ್ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಫೇಸ್‌ಬುಕ್, ವಾಟ್ಸ್ ಆ್ಯಪ್ ಸೇರಿ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ವ್ಯಕ್ತಿಗಳು ದೇಶದ ಅತ್ಯುನ್ನತ ಸಂವಿಧಾನಾತ್ಮಕ ಹುದ್ದೆಯಲ್ಲಿರುವ ಪ್ರಧಾನ ಮಂತ್ರಿ ವಿರುದ್ಧ ಅವಮಾನಕಾರಿ ಹಾಗು ಸಾರ್ವಜನಿಕರಲ್ಲಿ ಉದ್ವಿಗ್ನತೆ ಉಂಟುಮಾಡುವ ರೀತಿಯ ಹೇಳಿಕೆಗಳನ್ನು ಪ್ರಕಟಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕೆಲವು ಕಾಂಗ್ರೆಸ್ ಮುಖಂಡರು ಹಾಗು ಪದಾಧಿಕಾರಿಗಳು ತಮ್ಮ ಸಾಮಾಜಿಕ ಜಾಲತಾಣ ಖಾತೆಗಳ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಅಸಭ್ಯ ಮತ್ತು ಪ್ರಚೋದನಕಾರಿ ಪದಗಳನ್ನು ಬಳಸಿ ಪೋಸ್ಟ್‌ಗಳನ್ನು ಹಂಚಿಕೊಂಡಿದ್ದಾರೆ. ಇಂತಹ ಹೇಳಿಕೆಗಳು ಕೇವಲ ವ್ಯಕ್ತಿಯ ವಿರುದ್ಧದ ಟೀಕೆಗಳಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆ, ಸಂವಿಧಾನಾತ್ಮಕ ಹುದ್ದೆಗಳ ಗೌರವ ಹಾಗು ಸಾರ್ವಜನಿಕ ಶಾಂತಿ-ಸುವ್ಯವಸ್ಥೆಯ ಮೇಲೂ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದರು.

ಅವಹೇಳನಕಾರಿ ಹೇಳಿಕೆಗಳನ್ನು ಪ್ರಕಟಿಸಿರುವ ಆರೋಪ ಎದುರಿಸುತ್ತಿರುವ ನಂಜೇಗೌಡ, ಡಾ.ಲಕ್ಷ್ಮೀಕಾಂತ ಸಿಂಗೆ ಹಾಗು ಬಿಂದುಗೌಡ ಅವರ ವಿರುದ್ಧ ಸಮಗ್ರ ತನಿಖೆ ನಡೆಸಬೇಕು. ಆರೋಪಗಳು ದೃಢಪಟ್ಟಲ್ಲಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಹಾಗು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅನ್ವಯ ಸೂಕ್ತ ವಿಧಿಗಳಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಬಾಹುಬಲಿ ದೇವಸ್ಥಾನದ ಅರ್ಚಕ ಜಿನರಾಜ್, ಶಂಕರ ಪ್ರಸಾದ್, ಬೈಲಹಳ್ಳಿ ರಂಗನಾಥ, ನಗರಸಭೆ ಮಾಜಿ ಅಧ್ಯಕ್ಷ ಆರ್.ಮೋಹನ್, ಮಾಜಿ ಸದಸ್ಯ ಸಂತೋಷ್, ಮುಖಂಡರಾದ ರಾಜಾ ವೆಂಕಟೇಶ್, ಶೋಭನ ಬಾಬು, ಮದನ್, ಮಣಿ, ಮುರಳಿ, ಆಡುವಳ್ಳಿ ರಾಜಣ್ಣ, ಸ್ವಾಮಣ್ಣ, ರಘು ಉಪಸ್ಥಿತರಿದ್ದರು.

ಸ್ವಾಮಿ ವೀರೇಶಾನಂದ ಸರಸ್ವತೀ ಮಹಾರಾಜ್ ಅಭಿಮತ

ಒಳಿತು-ಕೆಡುಕುಗಳ ಪರಾಮರ್ಶೆಯೇ ವಿವೇಕ

• ಪ್ರಜೋದಯ ವರದಿ

ಹಾಸನ: ಯಾವುದು ಒಳಿತು, ಯಾವುದು ಕೆಡುಕು ಎನ್ನುವುದರ ಪರಾಮರ್ಶೆಯೇ ವಿವೇಕ. ಶಂಕರಾಚಾರ್ಯರು ಹೇಳಿದಂತೆ ಯುಕ್ತಾ ವಿವೇಕ ನಮ್ಮಲ್ಲಿರಬೇಕು. ನೀವು ವಿವೇಕದಿಂದ ನಡೆದುಕೊಂಡರೆ ಪ್ರಪಂಚ ಗೌರವಿಸುತ್ತದೆಂದು ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತೀ ಮಹಾರಾಜ್ ಅವರು ಹೇಳಿದರು.

ನಗರದ ಹೇಮಾವತಿ ನಗರದ ಗಾಯತ್ರಿ ಭವನದಲ್ಲಿ ಎಂ.ಎನ್.ಚಂದ್ರಲೇಖ ಸುಬ್ರಹ್ಮಣ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಛಾತ್ರೋಪಯೋಗೀ ಸಂಕಲ್ಪಿತ 9ನೇ ವಾರ್ಷಿಕ ಆರ್ಥಿಕ ಸಹಾಯ ವಿತರಣೆ ಸಮಾರಂಭದಲ್ಲಿ ದಿವ್ಯಸಾನ್ನಿಧ್ಯ ವಹಿಸಿ, ವಿವೇಕೋ ಪಾಸನೆಯಿಂದ ಉತ್ಕೃಷ್ಟ ಭವಿಷ್ಯ ಎಂಬ ವಿಷಯದ ಕುರಿತು ಅವರು ಮಾರ್ಗದರ್ಶನ ನೀಡಿದರು.

ಮೂರ್ಖರಿಗೆ ದೊಡ್ಡ ಪ್ರಮಾಣದ ಅನುಯಾಯಿಗಳ ಪಡೆ ಇದೆ ಎನ್ನುವ ಮಾತಿದೆ. ಮೂರ್ಖರು ಎಷ್ಟು ಸಂಘಟಿತರಾಗುತ್ತಾರೋ ವಿವೇಕವಂತರು ಅಷ್ಟೇ ಸುರಕ್ಷಿತರಾಗುತ್ತಾರೆ. ವಿವೇಕ ಎಂದರೆ ಕೇವಲ ಬುದ್ಧಿಶಕ್ತಿ, ನಾಜೂಕುತನ, ಚಮತ್ಕಾರ ಅಥವಾ ಯಶಸ್ಸಿನ ವೈಭವ ಆಚರಣೆ ಅಲ್ಲ. ನಾನು ಇಷ್ಟಪಟ್ಟಿದ್ದನ್ನು ಯೋಗ್ಯ ರೀತಿಯಲ್ಲಿ ಪಡೆದು ಯೋಗ್ಯತೆಯನ್ನು ಊರ್ಜಿತಗೊಳಿಸಿಕೊಳ್ಳುವುದೇ ನಿಜವಾದ ವಿವೇಕ. ವಿವೇಕವನ್ನು ಕುರಿತು ಧ್ಯಾನಿಸುವುದೇ ಜೀವನದ ಚರಮ ಕರ್ತವ್ಯ. ವಿವೇಕಪೂರ್ಣವಾಗಿ ಯೋಚನೆ ಆರಂಭಿಸಿದಾಗ ಎಲ್ಲಾ ದೌರ್ಬಲ್ಯಗಳನ್ನು ಕೊಡವಿ ಹಾಕಿ ಮುಂದೆ ಹೋಗಲು ಸಾಧ್ಯ. ಉತ್ತಮ ಹವ್ಯಾಸ ಹಾಗೂ ಅಭ್ಯಾಸಗಳು ನಮ್ಮನ್ನು ತಪ್ಪುಗಳಿಂದ ಮುಕ್ತವಾಗಿ ಮಾಡುತ್ತವೆಂದು ವಿವರಿಸಿದರು.

ಚಂದ್ರಲೇಖಾ ಸುಬ್ರಹ್ಮಣ್ಯ ಚಾರಿಟಬಲ್ ಟ್ರಸ್ಟ್‌ನಅಧ್ಯಕ್ಷ ಹೆಚ್.ಎಸ್.ಸುಬ್ರಹ್ಮಣ್ಯ ಅವರು ಮಾತನಾಡಿ, ಸಮಾಜಕ್ಕಾಗಿ ಮಾಡ ಬೇಕಾದ ಸೇವೆ ಮಾಡಲಾಗಲಿಲ್ಲವಲ್ಲ ಎಂದು ಬಹಳ ನೊಂದಿದ್ದೆ, ಹೀಗಾಗಿ ನನ್ನ ಮನೆ ಮಾರಾಟ ಮಾಡಿ ಬಂದ ಒಂದು ಕೋಟಿ ರೂ. ಹಣವನ್ನು ಟ್ರಸ್ಟ್‌ಗೆ ಹಾಕಿದೆ. ವೃತ್ತಿಯಲ್ಲಿ ಶಿಕ್ಷಕರಾಗಿದ್ದ ನಾನು ಹಾಗು ನನ್ನ ಪತ್ನಿ ಚಂದ್ರಲೇಖಾ ಇಬ್ಬರೂ, ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನೂ ಪಡೆದಿದ್ದೆವು. ಬಡ ಮಕ್ಕಳಿಗೆ ಶಿಕ್ಷಣ ನೀಡ ಬೇಕೆನ್ನುವುದು ನಮ್ಮ ಬಹುದೊಡ್ಡ ಧ್ಯೇಯವಾಗಿತ್ತು. ಅದರಂತೆ ನಮ್ಮ ಶಾಲೆಗೆ ಬರುತ್ತಿದ್ದ ವಿದ್ಯಾರ್ಥಿಗಳಲ್ಲಿ ಬಹುತೇಕರು ಪ್ಲಾಂಟೇಷನ್‌ಗಳಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರ ಕುಟುಂಬಗಳ ಮಕ್ಕಳೇ ಆಗಿರುತ್ತಿದ್ದರು ಎಂದು ಸ್ಮರಿಸಿದರು.

ನನ್ನ ವೃತ್ತಿ ಜೀವನದಲ್ಲಿ ನಾನು ಪಾಠ ಮಾಡಿದ ಮೂರೂವರೆ ಸಾವಿರ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಇಂದಿಗೂ ಆ ವಿದ್ಯಾರ್ಥಿಗಳು ನನ್ನ ಸಂಪರ್ಕ ದಲ್ಲಿದ್ದು, ಶೈಕ್ಷಣಿಕ ಹಾಗು ಸಾಂಸ್ಕೃತಿಕವಾಗಿ ಕೈಲಾದ ಸಹಾಯ ಮಾಡುತ್ತಿದ್ದೇವೆ. ಕಲಿತು ಕಲಿಸು, ಪಡೆದು ಕೊಡು ಎನ್ನುವುದು ನನ್ನ ಮಾರ್ಗ. ಟ್ರಸ್ಟ್ ಮೂಲಕ ಬಡ ವಿದ್ಯಾರ್ಥಿಗಳಿಗೆ ಕನಿಷ್ಠ ಮೂರು ಲಕ್ಷ ರೂ. ದಾನ ಮಾಡುತ್ತಿದ್ದೇನೆ. ಬಡ ರೋಗಿಗಳಿಗೆ ಆರ್ಥಿಕ ಸಹಾಯ, ಧಾರ್ಮಿಕ-ಸಾಮಾಜಿಕ ಸೇವಾ ಸಂಸ್ಥೆಗಳಿಗೆ ಹಾಗೂ ಗೋಶಾಲೆಗೆ ನೆರವು ನೀಡಲಾಗುತ್ತಿದೆಂದು ಹೇಳಿದರು.

ಸ್ನೇಹಿತ ಕೆ.ವಿ.ನಾಗರಾಜ್ ಅವರ ಟ್ರಸ್ಟ್ ನಿಂದಲೂ 15.60 ಲಕ್ಷ ರೂ. ನೀಡಿದ್ದೇವೆ. ಕಳೆದ ಎಂಟು ವರ್ಷಗಳಲ್ಲಿ ಒಟ್ಟು 35 ಲಕ್ಷ ರೂ. ವೆಚ್ಚ ಮಾಡಿದ್ದೇವೆ. ನೋಟ್ ಪುಸ್ತಕಗಳ ವಿತರಣೆ, ಹೃದ್ರೋಗಿಗೆ ಸಹಾಯಧನ, ಸರ್ಕಾರಿ ಶಾಲೆಗೆ ಲ್ಯಾಪ್‌ಟಾಪ್ ಕೊಡುಗೆ ನೀಡಲಾಗಿದೆ. ಈ ವರ್ಷ ನಾನು ಹತ್ತು ಮಕ್ಕಳಿಗೆ, ಎರಡು ಶಾಲೆ, ಒಂದು ಶಿಶುವಿಹಾರ ಹಾಗೂ ನಿವೇದಿತಾ ಶಾಲೆಗಳಿಗೆ ಆರ್ಥಿಕ ಸಹಾಯ ಮಾಡುತ್ತಿದ್ದೇನೆಂದು ತಮ್ಮ ಸೇವಾ ಕೈಂಕರ್ಯವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಆಯ್ದ ವಿದ್ಯಾರ್ಥಿಗಳಿಗೆ ಹಾಗೂ ಸಂಸ್ಥೆಗಳಿಗೆ ಸಂಕಲ್ಪಿತ ಸೇವಾಫಲ (ಆರ್ಥಿಕ ಸಹಾಯ) ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ಗಣ್ಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019